ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಡಿಸೆಂಬರ್ 25, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 222 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

# ಒಳ ಪಂಗಡಗಳ ಗುದ್ದಾಟದಿಂದ ಹೊರ ಬರಲು ಯಡಿಯೂರಪ್ಪ ಕರೆ



ದಾವಣಗೆರೆ, ಡಿ.24- ಒಳ ಪಂಗಡಗಳ ಗುದ್ದಾಟದಿಂದ ಹೊರ ಬಂದು ಒಂದಾಗಿ ಹೆಜ್ಜೆ ಇಟ್ಟಾಗ ಮಾತ್ರ ಈ ಮಹಾ ಅಧಿವೇಶನ ನಡೆಸಿದ್ದಕ್ಕೂ ಸಾರ್ಥಕವಾಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಸಭಾಂಗಣದಲ್ಲಿ ನಡೆಯುತ್ತಿರುವ ಅಖಿಲ ಭಾರತ ವೀರಶೈವ ಮಹಾಸಭಾದ 24ನೇ ಮಹಾ ಅವೇಶನದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜವನ್ನು ಒಂದುಗೂಡಿಸಬೇಕು. ಭಿನ್ನಾಭಿಪ್ರಾಯ ಬದಿಗೊತ್ತಿ ಒಟ್ಟಾಗಿ ಹೋದಾಗ ಮಾತ್ರ ಭವಿಷ್ಯ ಇದೆ ಎಂಬ ಕಾರಣಕ್ಕಾಗಿ ಶಾಮನೂರು ಶಿವಶಂಕರಪ್ಪನವರು ವಿಶೇಷ ಶ್ರಮ ವಹಿಸಿ ಅಧಿವೇಶನ ನಡೆಸುತ್ತಿದ್ದಾರೆ. ಈ ದಿಕ್ಕಿನಲ್ಲಿ ನಾವೆಲ್ಲರೂ ಒಂದಾಗಿ ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಕಡುಬಡವರು, ಹಿಂದುಳಿದವರು ಸೇರಿದಂತೆ ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗುವ ಶಕ್ತಿ ವೀರಶೈವ ಲಿಂಗಾಯತ ಸಮಾಜಕ್ಕಿದೆ. ಹೀಗೆ ಒಟ್ಟಾಗಿ ಮುನ್ನಡೆದಾಗ ಮಾತ್ರ ಸಮಾಜ ಪ್ರಭಲ ಶಕ್ತಿಯಾಗಿ ಹೊರ ಹೊಮ್ಮಲು ಸಾಧ್ಯ ಎಂದು ಹೇಳಿದರು.

ಒಬಿಸಿ ಪಟ್ಟಿಯಲ್ಲಿ ಸಮಾಜವನ್ನು ಸೇರಿಸಬೇಕೆಂಬ ಬಹು ದಿನದ ಹೋರಾಟಕ್ಕೆ ಸಂಪೂರ್ಣ ಬೆಂಬಲ ಹಾಗೂ ಸಹಕಾರ ಕೊಡುವುದಾಗಿ ಯಡಿಯೂರಪ್ಪ ಹೇಳಿದರು.

ಮಠ ಮಾನ್ಯಗಳು ಇರದಿದ್ದರೆ ದೇಶ ಎಂದೋ ನಾಶವಾಗುತ್ತಿತ್ತು. ನಮ್ಮ ಸಂಸ್ಕೃತಿಯ ಬಲಿಷ್ಠ ಬೇರುಗಳಂತೆ ಮಠ ಮಾನ್ಯಗಳು ಕಾರ್ಯ ನಿರ್ವಹಿಸುತ್ತಿವೆ. ಅಕ್ಷರ, ಆರೋಗ್ಯ ದಾಸೋಹದ ಮೂಲಕ ಸರ್ಕಾರದ ಹೊಣೆಯನ್ನು ಕಡಿಮೆ ಮಾಡಿವೆ. ಈ ಹಿನ್ನೆಲೆಯಲ್ಲಿ ಎಷ್ಟೇ ಟೀಕೆಗಳು ಬಂದರೂ ತಾವು ಮುಖ್ಯಮಂತ್ರಿಗಳಾಗಿದ್ದಾಗ ಮಠಗಳಿಗೆ ಅನುದಾನ ಕೊಡುವ ಕಾರ್ಯ ಮುಂದುವರೆಸಿದ್ದಾಗಿ ಅವರು ಹೇಳಿದರು.

ವೀರಶೈವ-ಲಿಂಗಾಯತ ಸಮಾಜದ ಅಧಿಕಾರಿಗಳಿಗೆ ಸೂಕ್ತ ಸ್ಥಾನಮಾನ ದೊರೆಯದಿರುವ ಬಗ್ಗೆ ದೂರುಗಳಿವೆ. ಸರ್ಕಾರದ ಸಚಿವರು ಸಮಾಜದ ಅಧಿಕಾರಿಗಳಿಗೆ ಸೂಕ್ತ ಜವಾಬ್ದಾರಿ ನೀಡಲು ಹಿಂದೇಟು ಹಾಕಬಾರದು ಎಂದು ಹೇಳಿದರು.

ಸರ್ಕಾರವು ಯಾವುದೇ ಒಂದು ವರ್ಗವನ್ನು ಅತಿಯಾಗಿ ಓಲೈಸದೆ, ತುಷ್ಟೀಕರಣ ಮಾಡದೆ ಲಭ್ಯವಿರುವ ಅನುದಾನವನ್ನು ಸೂಕ್ತವಾಗಿ ಹಂಚಿಕೆ ಮಾಡುವ ಮೂಲಕ ಎಲ್ಲರ ವಿಶ್ವಾಸ ಗಳಿಸಲು ಪ್ರಯತ್ನಿಸಬೇಕು ಎಂದು ಹೇಳಿದರು.

ಪಕ್ಷ ಬೇಧ ಮರೆತು ಸಮಾಜ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಶಾಮನೂರು ಶಿವಶಂಕರಪ್ಪ ನವರ ಕಾರ್ಯವನ್ನು ಶ್ಲಾಘಿಸಿದ ಯಡಿಯೂರಪ್ಪ, ಅವರ (4ನೇ ಪುಟಕ್ಕೆ)

## ಮಹಾಧಿವೇಶನದಲ್ಲಿ 8 ನಿರ್ಣಯಗಳು



ನಿರ್ಣಯ ಮಂಡಿಸಿದ ಎಸ್ಸೆಸ್

ಕಳೆದ ಎರಡು ದಿನಗಳ ಕಾಲ ನಡೆದ ವೀರಶೈವ-ಲಿಂಗಾಯತ ಮಹಾಸಭಾದ ಮಹಾ ಅಧಿವೇಶನದಲ್ಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರು 8 ನಿರ್ಣಯಗಳನ್ನು ಮಂಡಿಸಿದರು.

ದೇಶದ ಅಖಂಡತೆ, ಏಕತೆ, ಸಮಗ್ರತೆ, ಭದ್ರತೆಯ ರಕ್ಷಣೆಗೆ 'ಮಹಾಸಭೆ' ಹಾಗೂ ನಮ್ಮ ಸಮಾಜ ಸದಾ ಕಟಿಬದ್ಧವಾಗಿದ್ದು, ಅಂತಹ ಯಾವುದೇ ಹೋರಾಟ, ಪ್ರಯತ್ನಗಳಿಗೆ ಈ ಹಿಂದಿನಂತೆಯೇ ಪ್ರೋತ್ಸಾಹ, ಬೆಂಬಲ ನೀಡುತ್ತದೆ.

ವಿಶ್ವಗುರು ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕರೆಂದು ಸರ್ಕಾರ ಅಧಿಕೃತವಾಗಿ ಘೋಷಿಸಬೇಕು.

ವೀರಶೈವ-ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳನ್ನೂ ಒಳಗೊಂಡಂತೆ ಕೇಂದ್ರ ಸರ್ಕಾರದ ಇತರ ಹಿಂದುಳಿದ ವರ್ಗಗಳ (ಓ.ಬಿ.ಸಿ.) ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರವು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಮತ್ತು ಕೇಂದ್ರ ಸರ್ಕಾರ ಈ ಶಿಫಾರಸ್ಸನ್ನು ಅಂಗೀಕರಿಸಬೇಕು.


ಜಾತಿ ಜನಗಣತಿ ಸುಮಾರು 8 ವರ್ಷಗಳಷ್ಟು ಹಳೆಯದಾಗಿದ್ದು, ಅಧಿಕೃತವಾಗಿ ಅಂಗೀಕಾರವಾಗುವ ಮೊದಲೇ ಅದರಲ್ಲಿನ ಅಂಶಗಳು ಸೋರಿಕೆಯಾಗಿವೆ ಎನ್ನಲಾಗಿದೆ. ಈ ನಿಟ್ಟಿನಲ್ಲಿ ಕಾಂತರಾಜು ಆಯೋಗದ ವರದಿಯನ್ನು ಸರ್ಕಾರ ಒಪ್ಪಿಕೊಳ್ಳದೆ, ವೀರಶೈವ – ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳನ್ನೂ ಒಳಗೊಂಡಂತೆ ವಾಸ್ತವಿಕತೆಯ ಮತ್ತು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಹಿಂದುಳಿದಿರುವಿಕೆಯ ಆಧಾರದ ಮೇಲೆ ವೈಜ್ಞಾನಿಕವಾಗಿ ಜಾತಿ (4ನೇ ಪುಟಕ್ಕೆ)



### ಸಂತ ತೋಮಸರ ದೇವಾಲಯದಲ್ಲಿ ಬಾಲ ಏಸುವಿಗೆ ವಿಶೇಷ ಆರಾಧನೆ

ದಾವಣಗೆರೆ ಪಿ.ಜೆ. ಬಡಾವಣೆಯ ಸಂತ ತೋಮಸರ ದೇವಾಲಯದಲ್ಲಿ ಕ್ರಿಸ್‌ಮಸ್ ಅಂಗವಾಗಿ ಭಾನುವಾರ ಮಧ್ಯರಾತ್ರಿ ಬಾಲ ಏಸುವನ್ನು ಗೋದಲಿ (ದನದ ಕೊಟ್ಟಿಗೆ)ಯಲ್ಲಿ ಪ್ರತಿಷ್ಠಾಪಿಸಲಾಯಿತು. ವಿಶೇಷ ಆರಾಧನೆಯನ್ನು ಧರ್ಮಗುರುಗಳು ನಡೆಸಿಕೊಟ್ಟರು.

## ಸಮಾಜ ಒಂದಾದರೆ ವ್ಯಕ್ತಿಗತ ಬೆಳವಣಿಗೆ: ಪಂಡಿತಾರಾಧ್ಯ ಶ್ರೀ



ದಾವಣಗೆರೆ, ಡಿ.24- ಸಮಾಜ ಒಂದಾದರೆ ಮಾತ್ರ ವ್ಯಕ್ತಿಗತ ಹಾಗೂ ಸಾಮೂಹಿಕ ಬೆಳವಣಿಗೆ ಸಾಧ್ಯ ಎಂದು ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಮಹಾಸ್ವಾಮೀಜಿ ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾದ 24ನೇ ಮಹಾ ಅವೇಶನದ ಸಮಾರೋಪ ಸಮಾರಂಭ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಮ್ಮಲ್ಲಿರುವ (4ನೇ ಪುಟಕ್ಕೆ)

## ಲತಾ ವಿಶ್ವನಾಥ್ ನಿಧನ



ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ (ತಾಂತ್ರಿಕ) ಶ್ರೀ ಎಸ್.ಡಿ. ವಿಶ್ವನಾಥ್ ಅವರ ಧರ್ಮಪತ್ನಿ **ಶ್ರೀಮತಿ ಲತಾ ವಿಶ್ವನಾಥ್** ಅವರು ದಿನಾಂಕ 24-12-2023ರ ಭಾನುವಾರ ಸಂಜೆ 5.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 62 ವರ್ಷ ವಯಸ್ಸಾಗಿತ್ತು.

ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು, ಸಾದರಳ್ಳಿ ಸಹೋದರರು ಮತ್ತು ಬಂಧುಗಳನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು 4ನೇ ತಿರುವು, 4ನೇ ಮುಖ್ಯರಸ್ತೆ, ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್, ದಾವಣಗೆರೆ ಇಲ್ಲಿರುವ ಮೃತರ ನಿವಾಸದಲ್ಲಿರಿಸಲಾಗಿದ್ದು, ದಿನಾಂಕ 25-12-2023ರ ಸೋಮವಾರ ಸಂಜೆ 4 ಗಂಟೆಗೆ ಗ್ಲಾಸ್‌ಹೌಸ್ ಬಳಿ ಇರುವ ಶಾಮನೂರು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗ

## ಇಂದು ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ಕಾರ್ತಿಕ



ಪದ್ಧತಿ ಪ್ರಕಾರ ದಿ.: 25.12.2023ರ ಸೋಮವಾರ
ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಯ ಕಡೇ ಕಾರ್ತಿಕೋತ್ಸವ
ನಡೆಯುತ್ತದೆ ಹಾಗೂ ಸಂಜೆ 7 ಗಂಟೆಗೆ ಸಣ್ಣ ರಥದಲ್ಲಿ ಶ್ರೀ ಸ್ವಾಮಿಯ ಮೆರವಣಿಗೆ ನಡೆಯುವುದು.
ಕೆ.ಬಿ. ರಾಜು, ಚಿ. ಪ್ರತೀಕ್ ಮತ್ತು ಕುಟುಂಬದವರಿಂದ ಶ್ರೀ ಬಕ್ಕೇಶ್ವರ ಸ್ವಾಮಿ ಗದ್ದಿಗೆಗೆ 'ಹೂವಿನ ಅಲಂಕಾರ ಸೇವೆ'
ನಂತರ ರಾತ್ರಿ 10 ಗಂಟೆಗೆ
ದಿ. ಶ್ರೀ ಮಾಗಾನಹಳ್ಳಿ ಷಣ್ಮುಖಪ್ಪ ಅವರ 'ಶ್ರೀ ಶಿವಾನಂದ ಸ್ಟೋರ್ಸ್' ಮಂಡಿಪೇಟೆ, ದಾವಣಗೆರೆ ಇವರಿಂದ 'ಸಿಡಿಮದ್ದಿನ' ಕಾರ್ಯಕ್ರಮ ಏರ್ಪಡಿಸಲಾಗಿದೆ. ನಂತರ ಕಾರ್ತಿಕ ದೀಪೋತ್ಸವವನ್ನು ವಿಜೃಂಭಣೆಯಿಂದ ದೇವಸ್ಥಾನದ ಆವರಣದಲ್ಲಿ ನಡೆಸಲಾಗುವುದು.
ಸರ್ವ ಭಕ್ತಾದಿಗಳು ಸಕಾಲಕ್ಕೆ ಆಗಮಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ (ರಿ.) ಹಾಗೂ ರಥೋತ್ಸವ ಕಮಿಟಿ
ಚೌಕಿಪೇಟೆ, ದಾವಣಗೆರೆ.

## ಪ್ರತ್ಯೇಕ ಧರ್ಮ ಎಂಬ ಸಂಚು ತಡೆದಿದ್ದು ಎಸ್ಸೆಸ್



ದಾವಣಗೆರೆ, ಡಿ. 24 - ಪ್ರತ್ಯೇಕ ಧರ್ಮದ ಹೆಸರಿನಲ್ಲಿ ವೀರಶೈವ ಲಿಂಗಾಯತ ಸಮಾಜವನ್ನು ಒಡೆದು ಆಳಲು ಮುಂದಾದ ಸಂದರ್ಭದಲ್ಲಿ, ಅದನ್ನು ತಡೆದಿದ್ದು ಅಖಿಲ ಬಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಅಧಿವೇಶನದ ಸಂದರ್ಭದಲ್ಲಿ (2ನೇ ಪುಟಕ್ಕೆ)


## ಹೃದಯಪೂರ್ವಕ ಕೃತಜ್ಞತೆಗಳು




ದಿನಾಂಕ 24-12-2023ರಂದು ನಡೆದ
ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ
ಇದರ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯಲ್ಲಿ ಬಿಜೆಪಿ ಮುಖಂಡರಾದ
ಶ್ರೀ ದೊಗ್ಗಳ್ಳಿ ವೀರೇಶ್ ಹಾಗೂ ಶ್ರೀ ಭಾನುವಳ್ಳಿ ರಾಜಪ್ಪ ಇವರ ನೇತೃತ್ವದ ತಂಡವು ಜಯಭೇರಿ ಬಾರಿಸಿದ್ದು, ಈ ಒಂದು ಪ್ರಚಂಡ ಗೆಲುವಿಗೆ ಸಹಕರಿಸಿದ ಹಾಲು ಉತ್ಪಾದಕರ ಸಹಕಾರ ಸಂಘದ ಎಲ್ಲಾ ಮತದಾರ ಬಾಂಧವರಿಗೆ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು.



ಎ. ಮುನಿಯಪ್ಪ | ಎ.ಬಿ. ವಸಂತಪ್ಪ | ಕೆ.ಎಂ. ವೀರೇಶ್ | ಹೆಚ್.ಕೆ. ಚಂದ್ರಪ್ಪ | ಎ.ಕೆ. ಗಂಗಾಧರ | ಪಿ.ಇ. ಸಿದ್ದಲಿಂಗಪ್ಪ



ಶ್ರೀಮತಿ ಸರಿತಾ ಮಹೇಶ್ವರಪ್ಪ | ಶ್ರೀಮತಿ ಶಶಿಕಲಾ ರೇವಣಸಿದ್ದಪ್ಪ | ಎಸ್. ಶಿವಕುಮಾರ್ | ಶ್ರೀಕೃಷ್ಣ | ಪೂಜಾರ್ ಚಂದ್ರಪ್ಪ

## 13th Year Memory



In ever loving Memory of
**Smt. K.L. Yashodha**
w/o Late Sri B.K.G. Lakshman Setty
Who left us on 25.12.2010

Smt. K.L. Yashodha
24.12.1932 - 25.12.2010
9/2971, 'Sri' Nivas' 6th Main,
MCC'B' Block, Davangere-4.

Daughters and Son's In-Law
**Smt. Geetha Srinivasulu,** Hospet
**Smt. Dr. Sunitha & Sri T.V. Sushil Kumar,** Lincolnshire, U.K.
**Smt. Sadhana & Sri Nagendra Prasad,** Mysore
**Smt. Dr. Vandana & Sri Dr. Rajendra Desai,** Davangere.
**Smt. Lakshmi & Sri Sreeram,** Sydney, Australlia
Grand Children :
**Sindhu, Santosh, Sripal, Teju, Shantanu And Pooja**

## ಜನ್ಮದಿನದ ಶುಭಾಶಯಗಳು...




ಇಂದು 17ನೇ ವರ್ಷದ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರುವ
**ಕು|| ಸಹನ ಎಂ.**
ಇವರಿಗೆ ಜನ್ಮದಿನದ ಶುಭಾಶಯಗಳು...

ಶುಭ ಕೋರುವವರು :
ತಂದೆ : ಮಂಜುನಾಥ್ ಡಿ., ತಾಯಿ : ಡಿ. ಶೋಭಾ, ಚಿತ್ರದುರ್ಗ.
ಶಾಮನೂರು ಸುರೇಶ್, ಡಿಎಸ್‌ಎಸ್ ಮಾಜಿ ಅಧ್ಯಕ್ಷರು
ಲಕ್ಷ್ಮಣ (ಧರ್ಮ), ಎಂ. ಅಜಯ್ ಕುಮಾರ್, ಬೋಜ, ಪಿ. ಪರಶುರಾಮ್, ಏಸು, ಪ್ರದೀಪ್ (ಬಾತ), ವಾಸು, ಚನ್ನಪ್ಪ, (ಬ್ಯಾಡರಳ್ಳಿ), ರಂಗಣ್ಣ (ಬ್ಯಾಡರಳ್ಳಿ), ಮಂಜುನಾಥ್ (ಕುನಿಕೇರೆ), ಗಣೇಶ್, ಹನುಮಂತ್, ವಿನಯ್ ಕುಮಾರ್, ಅನಿಲ್, ಶ್ರೀಧರ, ಬಸವರಾಜ್, ಚಿತ್ರದುರ್ಗ, ನಿಟುವಳ್ಳಿ.



# ಮಹಿಳೆಯರಿಂದ ಮಕ್ಕಳಿಗೆ ಶಿಕ್ಷಣ, ಸಂಸ್ಕಾರ ಸಾಧ್ಯ

## ಸಾಲಕಟ್ಟೆ : ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಶಾಸಕ ಹರೀಶ್ ಇಂಗಿತ



ಮಲೇಬೆನ್ನೂರು, ಡಿ.24- ಮನೆಯಲ್ಲಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಮತ್ತು ಸಂಸ್ಕಾರ ಕೆಲಸವನ್ನು ಮಹಿಳೆಯರು ಮಾಡಬೇಕು. ಆ ಮೂಲಕ ದೇಶದ ಪ್ರಗತಿಗೆ ಕೈ ಜೋಡಿಸಬೇಕೆಂದು ಶಾಸಕ ಬಿ.ಪಿ.ಹರೀಶ್ ಮಹಿಳೆಯರಲ್ಲಿ ಮನವಿ ಮಾಡಿದರು.

ಅವರು, ಭಾನುವಾರ ಸಾಲಕಟ್ಟೆ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೆ.ಬೇವಿನಹಳ್ಳಿ ವಲಯದ ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟಗಳು ಮತ್ತು ಪೂಜಾ ವ್ಯವಸ್ಥಾಪನಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆಯ ಸಭಾ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿ ಮಾತನಾಡಿದರು.

ಕುಟುಂಬದ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದ್ದು, ಅದಕ್ಕಾಗಿಯೇ ಡಾ. ವೀರೇಂದ್ರ ಹೆಗ್ಗಡೆ ಅವರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಿದ್ದಾರೆ. ಜೊತೆಗೆ ಅವರಿಗೆ ಬ್ಯಾಂಕ್ ವ್ಯವಹಾರದ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಪ್ರಸ್ತುತ ರಾಜ್ಯದ ಪ್ರತಿ ಹಳ್ಳಿಯಲ್ಲೂ ಶೇ.90 ರಷ್ಟು ಮಹಿಳೆಯರು ಬ್ಯಾಂಕ್ ವ್ಯವಹಾರದ ಜ್ಞಾನ ಹೊಂದಿದ್ದಾರೆ ಎಂದು ಹರೀಶ್ ಹೇಳಿದರು.

ಧಾರ್ಮಿಕ ಉಪನ್ಯಾಸ ನೀಡಿದ ದಾವಣಗೆರೆ ವ್ಯಂಗ್ಯ ಚಿತ್ರಕಾರ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹೆಚ್.ಬಿ.ಮಂಜುನಾಥ್ ಅವರು, ದೇಶದ ಆರ್ಥಿಕ ಶಕ್ತಿ ಬೆಳೆದಿರುವುದು ಹಳ್ಳಿಗಳಿಂದಲೇ ಹೊರತು ನಗರಗಳಿಂದಲ್ಲ. ಕೃಷಿ ಇದ್ದರೆ ಮಾತ್ರ ಕೈಗಾರಿಕೆಗಳ ನಡೆಯುತ್ತೇವೆ. ಭಾರತ ದೇಶ 2025ರ ವೇಳೆಗೆ 5 ಟ್ರಿಲಿಯನ್ ಡಾಲರ್ ಆರ್ಥಿಕ ಶಕ್ತಿ ಹೊಂದುವ ಗುರಿ ಹೊಂದಿದ್ದು, ಈಗ 3.5 ಟ್ರಿಲಿಯನ್ ಆರ್ಥಿಕ ಶಕ್ತಿ ಪಡೆದಿದೆ. ದೇಶಕ್ಕೆ ಅನ್ನ ಕೊಡುವವರು ರೈತರೇ ಹೊರೆತು ಕೈಗಾರಿಕೆಗಳು, ಶ್ರೀಮಂತರಲ್ಲ. ಈ ಹಿನ್ನೆಲೆಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರು, ದೇಶದಲ್ಲಿರುವ 6 ಲಕ್ಷದ 46 ಸಾವಿರ ಹಳ್ಳಿಗಳ ಉದ್ಧಾರ ಆಗದ ಹೊರೆತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಅಂದೇ ಹೇಳಿದ್ದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಸಾಲಕಟ್ಟೆ ಗ್ರಾಮದ ಹಿರಿಯ ಮುಖಂಡ ಡಿ.ಎಂ.ಹಾಲಸ್ವಾಮಿ, ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋನಾಧಿಕಾರಿ ವಸಂತ್ ದೇವಾಡಿಗ, ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಜ್ಯೋತಿ ನಾಗರಾಜ್, ಪ್ರಗತಿಪರ ಕೃಷಿಕ ಡಾ. ವೆಂಕಟ ರಾಮಾಂಜನೇಯ ಮಾತನಾಡಿದರು.

ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ ಅಧ್ಯಕ್ಷ ಎಂ.ಜಿ.ರಾಜಶೇಖರ್ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಜಿ.ಮಂಜುನಾಥ್ ಪಟೇಲ್, ಗ್ರಾಮದ ವಿ. ರಾಜಣ್ಣ, ಕೆ.ಯೋಗಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್ವರಯ್ಯ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್.ಶಿವಕುಮಾರ್, ಪೂಜಾ ಸಮಿತಿಯ ಕೆ.ಎಂ.ನಿಜಗುಣ, ಕೆ.ಎನ್. ದೇವೇಂದ್ರಪ್ಪ, ಶ್ರೀಮತಿ ವನಜಾಕ್ಷಿ, ಶಾಂತಮ್ಮ, ಸುನಂದಮ್ಮ, ಎಂ.ಎಂ.ಪಾಟೀಲ್, ಪಿ.ಶಿವಪ್ಪ, ಎ.ವಿಜಯಕುಮಾರ್, ಎ.ಶಂಭುಲಿಂಗಪ್ಪ, ಬಿ.ಉಮೇಶ್ ಆಚಾರ್ಯ, ನೇತ್ರಾ, ಎಸ್.ಜಿ. ಮಂಜುನಾಥ್, ಸುಮಂಗಲ, ಕೆ.ಬೇವಿನ ಹಳ್ಳಿಯ ವಲಯ ಮೇಲ್ವಿಚಾರಕ ಮಾರುತಿ ಗೌಡ, ಜಿಗಳಿಯ ವಲಯ ಮೇಲ್ವಿಚಾರಕ ಹರೀಶ್ ಮತ್ತಿತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ವೆಂಕಟೇಶ್ವರ ಸ್ವಾಮಿ ಬ್ರಹ್ಮರಥೋತ್ಸವ

ಬೇತೂರು ರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಮಧ್ಯಾಹ್ನ 3:30ಕ್ಕೆ ಬ್ರಹ್ಮರಥೋತ್ಸವ ನಡೆಯಲಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್. ಎಸ್ ಮಲ್ಲಿಕಾರ್ಜುನ್ ನೆರವೇರಿಸಲಿದ್ದು, ವಿವಿಧ ಕಲಾತಂಡಗಳಿಂದ ಭವ್ಯ ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 11 ಗಂಟೆಗೆ ಅನ್ನ ಸಂತರ್ಪಣಾ ಕಾರ್ಯಕ್ರಮ ಜರುಗಲಿದೆ.

# ಪ್ರತ್ಯೇಕ ಧರ್ಮ ಎಂದು ಸಮಾಜ ಒಡೆವ ಸಂಚು ತಡೆದಿದ್ದು ಎಸ್ಸೆಸ್



**ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ**

**(1ನೇ ಪುಟದಿಂದ)** ನಗರದ ಎಂ.ಬಿ.ಎ. ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಮಹಿಳಾ ಮತ್ತು ಯುವ ಅಧಿವೇಶನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತ್ಯೇಕ ಧರ್ಮದ ಹೆಸರಿನಲ್ಲಿ ವೀರಶೈವ ಲಿಂಗಾಯತ ಸಮಾಜವನ್ನು ಒಡೆಯಲು ಪ್ರಯತ್ನಿಸಲಾಗಿತ್ತು. ಆಗ ಶಾಮನೂರು ಶಿವಶಂಕರಪ್ಪ ನವರು ರಾಜಕಾರಣವನ್ನು ಕಿಂಚತ್ತೂ ಲೆಕ್ಕಿಸದೇ ಈ ಪ್ರಯತ್ನ ತಡೆದರು ಎಂದು ಹೇಳಿದರು.

ವೀರಶೈವ ಲಿಂಗಾಯತ ಸಮಾಜದ ಗೌರವದ ಪ್ರಶ್ನೆ ಬಂದಾಗ ಸಮಾಜದ ಏಳಿಗೆಯೇ ಮುಖ್ಯ ಎಂಬ ನಿಲುವು ತಳೆದರು. ನಮ್ಮ ಸಮಾಜವನ್ನು ಅಡ್ಡದಾರಿಗೆ ತೆಗೆದುಕೊಂಡು ಹೋಗಲು ಕೆಲವರು ನಡೆಸುತ್ತಿರುವ ಯತ್ನಕ್ಕೆ ಅವಕಾಶ ಕೊಡುವುದಿಲ್ಲ ಎಂದು ಗಟ್ಟಿಯಾಗಿ ದನಿ ಎತ್ತಿದ ಧೀಮಂತ ನಾಯಕ ಶಾಮನೂರು ಶಿವಶಂಕರಪ್ಪ ಎಂದವರು ತಿಳಿಸಿದರು.

ವೀರಶೈವ ಲಿಂಗಾಯತ ಸಮಾಜ ಈಗ ಕವಲು ದಾರಿಯಲ್ಲಿದೆ. ಇಂದು ಸಮಾಜದ ಪರವಾಗಿ ಗಟ್ಟಿಯಾಗಿ ದನಿ ಎತ್ತದೇ ಇದ್ದರೆ, ವೀರಶೈವ ಲಿಂಗಾಯತ ಸಮಾಜ ಇತಿಹಾಸದ ಪುಟ ಸೇರಲಿದೆ ಎಂದವರು ಎಚ್ಚರಿಸಿದರು.

ಕರ್ನಾಟಕ ಸಮಗ್ರ ಅಭಿವೃದ್ಧಿ ಕಾಣಲು ಸರ್ಕಾರಗಳು ಕಾರಣವಲ್ಲ. ಹತ್ತಾರು ದಶಕಗಳಿಂದ ಅನ್ನ ಹಾಗೂ ಶಿಕ್ಷಣ ದಾಸೋಹ ಮಾಡುತ್ತಿರುವ ಜಗದ್ಗುರುಗಳು ಹಾಗೂ ಸ್ವಾಮೀಜಿಗಳ ಮುಂದಾಲೋಚನೆ ಕಾರಣ. ವೀರಶೈವ ಲಿಂಗಾಯತ ಸಮುದಾಯ ಇಡೀ ರಾಜ್ಯದ ಮುನ್ನಡೆಗೆ ನೆರವಾಗುತ್ತಿದೆ ಎಂದು ವಿಜಯೇಂದ್ರ ಹೇಳಿದರು. ಇಂತಹ ಸಮಾಜವನ್ನು ರಕ್ಷಿಸಲು ನಾವೆಲ್ಲರೂ ಕೈ ಜೋಡಿಸಬೇಕಿದೆ. ಇಲ್ಲವಾದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ. ಸಮಾಜಕ್ಕೆ ಸಮಸ್ಯೆ ಬಂದಾಗ ನಾವೆಲ್ಲರೂ ಒಂದಾಗಿ ದನಿ ಎತ್ತಬೇಕು ಎಂದವರು ತಿಳಿಸಿದರು.

**ಧರ್ಮ ಪ್ರತ್ಯೇಕವಾಗಲಿ, ಒಳಪಂಗಡಗಳು ಒಂದಾಗಲಿ**

**ವೀರಶೈವ ಲಿಂಗಾಯತ ಪ್ರತ್ಯೇಕ ಧರ್ಮವಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ನಾಯಕ ಜಗದೀಶ್ ಶೆಟ್ಟರ್ ಪ್ರತಿಪಾದಿಸಿದರು.**

**ಎಲ್ಲರೂ ಸೇರಿ ವೀರಶೈವ ಲಿಂಗಾಯತ ಸ್ವತಂತ್ರ ಧರ್ಮ ಸ್ಥಾನ ಪಡೆಯಲು ಹೋರಾಟ ನಡೆಸಬೇಕು ಎಂದು ಹೇಳಿದರು.**

**ವೀರಶೈವ ಲಿಂಗಾಯತ ಸಮಾಜದ ಒಳಪಂಗಡಗಳು ಒಂದಾಗಬೇಕಿದೆ. ಇದಕ್ಕಾಗಿ ಒಳಪಂಗಡಗಳ ನಡುವೆ ವೈವಾಹಿಕ ಸಂಬಂಧ ಬೆಳೆಸಬೇಕು ಎಂದೂ ಶೆಟ್ಟರ್ ಕರೆ ನೀಡಿದರು.**

**ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹಾಗೂ ತಮ್ಮ ಕುಟುಂಬದವರು ವೈವಾಹಿಕ ಸಂಬಂಧ ಬೆಳೆಸಿಕೊಂಡಿದ್ದೇವೆ. ಉಳಿದವರೂ ಇದೇ ರೀತಿ ವೈವಾಹಿಕ ಸಂಬಂಧ ಬೆಳೆಸಿದರೆ ಒಳಪಂಗಡ ಮರೆಯಾಗುತ್ತದೆ ಎಂದರು.**

## ವಿಜಯೇಂದ್ರಗೆ ಶಿವಯೋಗಿಸ್ವಾಮಿ ಗೌರವ



ದಾವಣಗೆರೆ,ಡಿ.24- ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು, ರಾಜ್ಯ ಬಿಜೆಪಿ ಅಧ್ಯಕ್ಷರಾದ ನಂತರ ಇದೇ ಪ್ರಥಮ ಬಾರಿಗೆ ಇಂದು ನಗರಕ್ಕೆ ಆಗಮಿಸಿದ್ದ ಬಿ. ವೈ.ವಿಜಯೇಂದ್ರ ಅವರನ್ನು ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸ್ವಾಗತಿಸಿ, ಅಭಿನಂದಿಸಲಾಯಿತು. ಇದೇ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಅವರು ವಿಜಯೇಂದ್ರ ಅವರಿಗೆ ಶ್ರೀ ಸ್ವಾಮಿ ವಿವೇಕಾನಂದರ ಭಾವಚಿತ್ರ ಮತ್ತು ಪುಸ್ತಕವನ್ನು ನೀಡಿ ಗೌರವಿಸಿದರು.

## ಎಸ್‌ಎಆರ್ ನಿವಾಸಕ್ಕೆ ವಿಜಯೇಂದ್ರ



ದಾವಣಗೆರೆ, ಡಿ.24- ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ಇಂದು ನಗರಕ್ಕಾಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶಿರಮಗೊಂಡನಹಳ್ಳಿಯ ಎಸ್.ಎ. ರವೀಂದ್ರನಾಥ್ ಅವರ ನಿವಾಸಕ್ಕೆ ಭೇಟಿ ನೀಡಿ, ಕುಶಲೋಪರಿ ವಿಚಾರಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶ್ರೀಮತಿ ವೀಣಾ ನಂಜಣ್ಣ, ಎ.ಬಿ. ಕರಿಬಸಪ್ಪ, ಬೇತೂರು ಸಂಗಪ್ಪ, ಎಸ್.ಆರ್. ಈಶ್ವರಪ್ಪ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸಿಹಿ ಪ್ರಕಾಶನದ ವಾರ್ಷಿಕೋತ್ಸವ

ಸಿಹಿ ಪ್ರಕಾಶನದ ವತಿಯಿಂದ ಇಂದು ಬೆಳಿಗ್ಗೆ 10.30ಕ್ಕೆ ವನಿತಾ ಸಮಾಜದಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಸಿಹಿ ಪ್ರಕಾಶನದ 19ನೇ ವಾರ್ಷಿಕೋತ್ಸವ ಹಾಗೂ ಸನ್ಮಾನ ಸಮಾರಂಭ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಕವಯಿತ್ರಿ ಶ್ರೀಮತಿ ಸತ್ಯಭಾಮ ಮಂಜುನಾಥ್ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಪ್ರೊ. ಬಿ.ಬಿ.ಪಾಟೀಲ ವಹಿಸುವರು.

ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಹಾಸ್ಯ ಸಾಹಿತಿಗಳಾದ ಕೋ.ಲ.ರಂಗನಾಥರಾವ್, ಎಸ್.ಎಸ್.ಪಡಶೆಟ್ಟಿ, ಕನ್ನಡಪರ ಹೋರಾಟಗಾರ ಬಂಕಾಪುರದ ಚನ್ನಬಸಪ್ಪ ಆಗಮಿಸುವರು. ಇದೇ ಸಂದರ್ಭದಲ್ಲಿ ಹಿರಿಯ ಸಾಹಿತಿ ಮಳಲಕೆರೆ ಗುರುಮೂರ್ತಿ ಅವರನ್ನು ಸನ್ಮಾನಿಸಲಾಗುವುದು.

## ಶ್ರೀ ಕೊಟ್ಟೂರೇಶ್ವರ, ಶ್ರೀ ಉಜ್ಜಯಿನಿ ಮರುಳಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಇಂದು



ಕೊಟ್ಟೂರಿನ ಕೊಟ್ಟೂರೇಶ್ವರ ಮತ್ತು ಉಜ್ಜಯಿನಿ ಸದ್ಧರ್ಮ ಪೀಠದ ಮರುಳಸಿದ್ದೇಶ್ವರ ಸ್ವಾಮಿ ಕಾರ್ತಿಕೋತ್ಸವ ಇಂದು ನಡೆಯಲಿದೆ.

ಕೊಟ್ಟೂರು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಕಾರ್ತಿಕೋತ್ಸವದಂದು ಸಂಜೆ ದೀಪೋತ್ಸವ ಪ್ರಾರಂಭಗೊಂಡರೆ ಅಂದು ಮಧ್ಯರಾತ್ರಿ ಉದ್ದಕ್ಕೂ ಸ್ವಾಮಿ ಬೆಳ್ಳಿ ರಥೋತ್ಸವ ಜರುಗಲಿದೆ.

ಉಜ್ಜಯಿನಿ ಮರುಳಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಮತ್ತು ಲಕ್ಷ ದೀಪೋತ್ಸವ ಸಂಜೆ ನಡೆಯಲಿದೆ.

ಮಧ್ಯಾಹ್ನ 12 ಗಂಟೆಗೆ ಲಿಂ.ಜಗದ್ಗುರು ಮರುಳಸಿದ್ದ ಶಿವಾಚಾರ್ಯ ಸ್ವಾಮಿಗಳ 12 ವರ್ಷದ ಪುಣ್ಯಸ್ಮರಣೋತ್ಸವ ನರವೇರಲಿದೆ. ಅಲ್ಲದೇ ಸಮೂಹಿಕ ವಿವಾಹ ಮತ್ತು ಧರ್ಮಸಭೆಯನ್ನು ಸದ್ಧರ್ಮ ಪೀಠ ಹಮ್ಮಿಕೊಂಡಿದೆ.

## ಅದಮ್ಯ ಕಲಾ ಸಂಸ್ಥೆಯಿಂದ ಕನಕದಾಸ ಜಯಂತಿ



ದಾವಣಗೆರೆ, ಡಿ. 24 - ಅದಮ್ಯ ಕಲಾ ಸಂಸ್ಥೆ ಹಾಗೂ ಅದಮ್ಯ ಫೌಂಡೇಷನ್ ಇವರುಗಳ ಆಶ್ರಯದಲ್ಲಿ ಶ್ರೀ ದುರ್ಗಾಂಬಿಕಾ ಶಾಲಾ ಆವರಣದಲ್ಲಿ ಕನಕದಾಸ ಜಯಂತಿಯನ್ನು ಆಚರಿಸಲಾಯಿತು.

ನಿವೃತ್ತ ಪ್ರಾಂಶುಪಾಲ ಟಿ.ಹೆಚ್. ಗುಡ್ಡಪ್ಪ ಅವರು ಸಂತ ಕನಕದಾಸರ ಕುರಿತು ಉಪನ್ಯಾಸ ನೀಡಿದರು. ಅಧ್ಯಕ್ಷತೆಯನ್ನು ಗಣೇಶ್ ಬಾಬು ವಹಿಸಿದ್ದರು. ಶ್ರೀ ದುರ್ಗಾಂಬಿಕಾ ದೇವಸ್ಥಾನದ ಟ್ರಸ್ಟಿ ಗೌಡ್ರ ಚನ್ನಬಸಪ್ಪ, ಹನುಮಂತರಾವ್ ಸಾವಂತ್, ಪಿ.ಜಿ. ಸತ್ಯನಾರಾಯಣ, ಅದಮ್ಯ ಕಲಾ ಸಂಸ್ಥೆಯ ಅಧ್ಯಕ್ಷ ಶ್ರೀಮತಿ ಗೀತಾ ಮಾಲತೇಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಅದಮ್ಯ ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಕು. ಪೃಥ್ವಿ ಪ್ರಾರ್ಥಿಸಿದರು. ಕು. ಪಲ್ಲವಿ ನಿರೂಪಿಸಿದರು.

## ಮಾದಿಗರ ನಡಿಗೆ ಬಳ್ಳಿಗಾವಿ ಕಡೆಗೆ

ಹೊನ್ನಾಳಿ, ಡಿ.24- ಮಾದರ ಚೆನ್ನಯ್ಯನವರ 973 ನೇ ಜಯಂತೋತ್ಸವವು ನಾಡಿದ್ದು ದಿನಾಂಕ 26ರ ಮಂಗಳವಾರ ಬೆಳಿಗ್ಗೆ 10 ಕ್ಕೆ ಶಿರಾಳಕೊಪ್ಪದ ನೇರಲಗಿಯಲ್ಲಿ ನಡೆಯಲಿದೆ ಎಂದು ಮಾದರ ಚೆನ್ನಯ ಬಳ್ಳಿಗಾವಿ ಸೇವಾ ಸಮಿತಿ ರಾಜ್ಯ ಉಪಾಧ್ಯಕ್ಷ ಮಲ್ಲಿಗೇನಹಳ್ಳಿ, ಕೆ. ರಾಜಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ಸಂದರ್ಭದಲ್ಲಿ ಅಂಬೇಡ್ಕರ್‌ರವರ 67 ನೇ ಪರಿನಿರ್ವಾಣ ದಿನ ಆಚರಿಸಲಾಗುವುದು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಶಿಕ್ಷಣ ಸಚಿವ ಮಧು ಬಂಗಾರಪ್ಪ, ಅಬಕಾರಿ ಸಚಿವ ತಿಮ್ಮಾಪುರ್, ಹೆಚ್. ಆಂಜನೇಯ, ಬಿ.ಎನ್. ಚಂದ್ರಪ್ಪ, ಬಿ.ವೈ. ರಾಘವೇಂದ್ರ, ವಿಜಯೇಂದ್ರ, ಶಾಸಕ ಶಾಂತನ ಗೌಡ, ಯು.ಬಿ. ಬಣಕಾರ್, ಬಸವಂತಪ್ಪ, ನಾಗರಾಜ ಗೌಡ್ರ, ಸಮಿತಿ ಗೌರವಾಧ್ಯಕ್ಷ ಚಂದ್ರಪ್ಪ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ದಿಡಗೂರು ರುದ್ರೇಶ್, ತಮ್ಮಣ್ಣ, ಆರ್. ನಾಗಪ್ಪ, ಕೊಡತಾಳ್ ರುದ್ರೇಶ್, ಬಿ.ಸಿ. ಮಂಜುನಾಥ್, ಕತ್ತಿಗೆ ಚನ್ನೇಶ್, ಮಾದೇನಹಳ್ಳಿ ಶೇಖರಪ್ಪ, ಯಕ್ಕನಹಳ್ಳಿ ಶಿವರಾಜ್ ಇನ್ನಿತರರಿದ್ದರು.

## ಅನ್‌ಮೋಲ್ ಶಾಲೆಯಲ್ಲಿ ವೀರ ಯೋಧ ಮತ್ತು ಅನ್ನದಾತನಿಗೆ ನಮನ

ಶಿರಮಗೊಂಡನಹಳ್ಳಿಯ ಅನ್‌ಮೋಲ್ ವಿದ್ಯಾಸಂಸ್ಥೆಯಲ್ಲಿ ಇಂದು ಸಂಜೆ 5ಕ್ಕೆ ಶಾಲಾ ಆವರಣದಲ್ಲಿ ಅನ್‌ಮೋಲ್ ಉತ್ಸವ 2023 ರ ಕಾರ್ಯಕ್ರಮವನ್ನು ಜೈ ಜವಾನ್ – ಜೈ ಕಿಸಾನ್ ಎಂಬ ಶೀರ್ಷಿಕೆಯಡಿ ಆಚರಿಸಲಾಗುತ್ತಿದೆ.

ಭಾರತೀಯ ಸೈನಿಕರು ಮತ್ತು ಅನ್ನದಾತ ರೈತರ ತ್ಯಾಗ ಶ್ರಮವನ್ನು ಪದಗಳಲ್ಲಿ ವರ್ಣಿಸಲಾಗದು. ಅವರು ನಿತ್ಯ ಪ್ರಾತಃ ಸ್ಮರಣೀಯರು. ಅವರಿಗೊಂದು ನಮನ ಸಲ್ಲಿಸಲು ಈ ಕಾರ್ಯಕ್ರಮ ಅರ್ಪಣೆ. ಸಮಾರಂಭದಲ್ಲಿ 2022-23 ನೇ ಸಾಲಿನಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವರ್ಷದ ವಿದ್ಯಾರ್ಥಿ ಪ್ರಶಸ್ತಿ ಪುರಸ್ಕಾರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಅನ್‌ಮೋಲ್ ವಿದ್ಯಾಸಂಸ್ಥೆ ಅಧ್ಯಕ್ಷ ಸಿ.ಜಿ. ದಿನೇಶ್ ಸಮಾರಂಭದ ಅಧ್ಯಕ್ಷತೆ ವಹಿಸುವರು.

## ಪಟೇಲ್ ಬಡಾವಣೆ ಅವ್ಯವಸ್ಥೆ ಸರಿಪಡಿಸಿ



ದಾವಣಗೆರೆ, ಡಿ.24- ಶಾಮನೂರು ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಹಂದಿಗಳ ಹಾವಳಿ ಹೆಚ್ಚಾಗಿದ್ದು, ಎಲ್ಲೆಂದರಲ್ಲಿ ಸತ್ತು ಬೀಳುತ್ತಿವೆ. ಅದರ ದುರ್ವಾಸನೆಯಿಂದ ಬಡಾವಣೆ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಎರಡು ದಿನವಾದರೂ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಜೆ.ಹೆಚ್. ಪಟೇಲ್ ಬಡಾವಣೆ ನಾಗರಿಕರು ದೂರಿದ್ದಾರೆ.


## ಆನೆಕೊಂಡದ ಸಣ್ಣ ಅಣಜಿ ಗೌರಮ್ಮ ನಿಧನ



ದಾವಣಗೆರೆ ಸಿಟಿ ಆನೆಕೊಂಡ ಗ್ರಾಮದ ವಾಸಿ ಸಣ್ಣ ಅಣಜಿ ದಿ. ಕರಿಬಸಪ್ಪನವರ ಧರ್ಮಪತ್ನಿ

**ಸಣ್ಣ ಅಣಜಿ ಗೌರಮ್ಮ**

ಇವರು ದಿನಾಂಕ 24.12.2023ರ ಭಾನುವಾರ ಬೆಳಿಗ್ಗೆ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.12.2023ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ಸಿಟಿ ಬಸಾಪುರ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ,**

**ಮೊ : 99027 56929, 99809 43542**


## ಹಳೇಬಾತಿಯಲ್ಲಿ ಇಂದಿನಿಂದ ಉರುಸು-ಷರೀಫ್ ಕಾರ್ಯಕ್ರಮಗಳು

ದಾವಣಗೆರೆ ತಾಲ್ಲೂಕಿನ ಹಳೇಬಾತಿ ಗ್ರಾಮದಲ್ಲಿ ಹಜರತ್ ಸೈಯದ್ ಚಮನ್ ಷಾವರದಿ ಚಿಸ್ತಿ ಅವರ ಉರುಸು-ಷರೀಫ್ ಕಾರ್ಯಕ್ರಮಗಳು ಇಂದಿನಿಂದ ನಡೆಯಲಿವೆ.

ಇಂದು ರಾತ್ರಿ 930ಕ್ಕೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ ದರ್ಗಾಕ್ಕೆ ಜಂಡೆ ಏರಿಸುವುದು.

ನಾಡಿದ್ದು ದಿನಾಂಕ 27ರ ಬುಧವಾರ ರಾತ್ರಿ 7 ಗಂಟೆಗೆ ಸ್ವಾಮಿಗಳವರ ಗಂಧ (ಸಂದಲ್) ಪಲ್ಲಕ್ಕಿಯಲ್ಲಿ ಬಾಜಾ ಭಜಂತ್ರಿಗಳೊಂದಿಗೆ ಹಳೇಬಾತಿ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಹಿಂದೂ-ಮುಸ್ಲಿಂ ಬಾಂಧವರೊಂದಿಗೆ ಮೆರವಣಿಗೆ ಹೊರಟು, ದರ್ಗಾ ಸೇರಲಿದೆ. ನಂತರ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದಲ್ಲಿ ಗಂಧ ನೆರವೇರಲಿದೆ.

ದಿನಾಕಂ 28ರ ಗುರುವಾರ ರಾತ್ರಿ ಸ್ವಾಮಿಗಳವರ ಉರುಸು ದರಗಾದಲ್ಲಿ ಫಾತೇಹಾ, 29ರಂದು ಭಕ್ತರಿಂದ ಸಕ್ಕರೆ ಓದಿಕೆ ಹಾಗೂ ಡಿ.30ರಂದು ಸ್ವಾಮಿ ಪ್ರಸಾದ ವಿನಿಯೋಗ ಇರುತ್ತದೆ.

## ಹಿರಿಯ ಕಲಾವಿದ ಮಲ್ಲೇಶ್ ನಿಧನಕ್ಕೆ ಚಿಂದೋಡಿ ಶಂಭುಲಿಂಗಪ್ಪ ಸಂತಾಪ



ದಾವಣಗೆರೆ, ಡಿ.24- ನಗರದ ರಂಗಭೂಮಿ ಹಿರಿಯ ಕಲಾವಿದ ಎಂ. ಮಲ್ಲೇಶ್ ಅವರ ನಿಧನಕ್ಕೆ ಹಿರಿಯ ರಂಗಭೂಮಿ ಕಲಾವಿದ ಚಿಂದೋಡಿ ಶಂಭುಲಿಂಗಪ್ಪ ಅವರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ತಬಲಾ, ಹಾರ್ಮೋನಿಯಂ, ಕೀಬೋರ್ಡ್, ಡ್ರಮ್ ಸೆಟ್ ಬಾರಿಸುವುದರಲ್ಲಿ ನಿಪುಣರಾಗಿದ್ದ ಮಲ್ಲೇಶ್ ಅವರು ತಮ್ಮ ಕಲೆಯಿಂದ ಶ್ರೀ ಗುರು ವಾದ್ಯವೃಂದಕ್ಕೆ ಕೀರ್ತಿ ತಂದಿದ್ದರು ಎಂದು ಶ್ರೀ ಗುರು ವಾದ್ಯವೃಂದದ ಅಧ್ಯಕ್ಷರೂ, ಕೆ.ಬಿ.ಆರ್ ಡ್ರಾಮಾ ಕಂಪನಿ ಮಾಲೀಕರೂ ಆಗಿರುವ ಚಿಂದೋಡಿ ಶಂಭುಲಿಂಗಪ್ಪ ಕಂಬನಿ ಮಿಡಿದಿದ್ದಾರೆ.

# ರಿಫ್ಲೆಕ್ಟಿವ್ ಟೇಪ್, ಕ್ಯೂ ಆರ್. ಕೋಡ್ ವಿರುದ್ಧ ಲಾರಿ ಮಾಲೀಕರ, ಏಜೆಂಟರ ಪ್ರತಿಭಟನೆ

ದಾವಣಗೆರೆ, ಡಿ.24- ಸರಕು ಸರಬರಾಜು ವಾಹನಗಳಿಗೆ ರಿಫ್ಲೆಕ್ಟಿವ್ ಟೇಪ್ ಜೊತೆಗೆ ಕ್ಯೂಆರ್ ಕೋಡ್, ಎಚ್‌ಎಸ್‌ಆರ್ ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ಪ್ಲೇಟ್ ಕಡ್ಡಾಯಗೊಳಿಸಿರುವುದನ್ನು ಖಂಡಿಸಿ, ಜಿಲ್ಲಾ ಲಾರಿ ಮಾಲೀಕರು ಮತ್ತು ಟ್ರಾನ್ಸ್‌ಪೋರ್ಟ್ ಏಜೆಂಟರ ಸಂಘ ನಗರದಲ್ಲಿ ನಿನ್ನೆ ಪ್ರತಿಭಟನೆ ನಡೆಸಲಾಯಿತು.

ಪ್ರಾದೇಶಕ ಸಾರಿಗೆ ಇಲಾಖೆ ಆವರಣದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳ ನೀತಿ ವಿರುದ್ಧ ಸಂಘದ ಜಿಲ್ಲಾ ಅಧ್ಯಕ್ಷ ಸೈಯದ್ ಸೈಫುಲ್ಲಾ ಇತರರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ನಂತರ ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಮುತೇಶ್‌ರ ಮುಖಾಂತರ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಮನವಿ ಅರ್ಪಿಸಲಾಯಿತು.




ಇದೇ ವೇಳೆ ಮಾತನಾಡಿದ ಸೈಯದ್ ಸೈಫುಲ್ಲಾ, ಕೇಂದ್ರ, ರಾಜ್ಯ ಸರ್ಕಾರಗಳ ಇಂತಹ ನೀತಿ, ನಿಯಮಗಳಿಂದ ವಾಹನ ಮಾಲೀಕರು ಆರ್ಥಿಕ ಸಂಕಷ್ಟಕ್ಕೆ ತುತ್ತಾಗುತ್ತಿದ್ದು, ಇದ್ಯಾವುದರ ಪರಿವೆ ಇಲ್ಲದಂತೆ ಉಭಯ ಸರ್ಕಾರಗಳು ವಾಹನ ಮಾಲೀಕರಿಗೆ ಇಲ್ಲಸಲ್ಲದ ನಿಯಮಗಳನ್ನು ಹೇರುತ್ತಾ ಸಾಗುತ್ತಿವೆ. ರಿಫ್ಲೆಕ್ಟಿವ್ ಟೇಪ್ ಕ್ಯೂಆರ್ ಕೋಡ್, ಎಚ್‌ಎಸ್‌ಆರ್‌ಪಿ ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ಪ್ಲೇಟ್ ಕಡ್ಡಾಯದಂತಹ ನಿಯಮಗಳು ವಾಹನ ಮಾಲೀಕರಿಗೆ ಆರ್ಥಿಕ ಹೊರೆಯಾಗುತ್ತಿವೆ ಎಂದರು.

ವಾಹನ ಮಾಲೀಕರಿಗೆ ಹೆಚ್ಚುವರಿ ಖರ್ಚಿಗೆ ಅವಕಾಶ ನೀಡುವ ಕೆಲಸ ಇದಾಗಿದೆ. ರಿಫ್ಲೆಕ್ಟಿವ್ ಟೇಪ್ ಮಾರುಕಟ್ಟೆಯಲ್ಲಿ 53 ರೂ.ಗೆ ಲಭ್ಯವಿದ್ದು, ಅದನ್ನು ಕ್ಯೂಆರ್ ಕೋಡ್ ಎಂಬುದಾಗಿ ಯಾವುದೇ ರೀತಿಯ ಕೇಂದ್ರ, ರಾಜ್ಯ ಸರ್ಕಾರಗಳ ಮೋಟಾರು ವಾಹನಗಳ ಕಾಯ್ದೆಯಲ್ಲಿ ನಿಯಮ ಇಲ್ಲದಿದ್ದರೂ, ಇಂತಹ ಆದೇಶ ಹೊರಡಿಸಲಾಗೆ. ಕೇವಲ 53 ರೂ.ಗೆ ಸಿಗುವ ರಿಫ್ಲೆಕ್ಟರ್ ಟೇಪನ್ನು ಸಾರಿಗೆ ಆಯುಕ್ತರ ಕಚೇರಿಯಿಂದ ಆದೇಶ ಹೊರಡಿಸಿ, 130 ರೂ.ಗೆ 1 ಮೀಟರ್‌ನಂತೆ ಕೆಲವು ಮಾರಾಟಗಾರರಿಗೆ ಸರ್ಕಾರದಿಂದ ಅಧಿಕೃತ ಮಾರಾಟಗಾರರೆಂದು ನೇಮಿಸಿ, ಜನರ ಸುಲಿಗೆ ಮಾಡುವ ದಂಧೆ ಶುರುವಾಗಿದೆ ಎಂದು ಅವರು ಆರೋಪಿಸಿದರು.

ಸರ್ಕಾರಗಳು ಸಹ ಇಂತಹ ನಿಯಮ ಮಾಡುವ ಮುನ್ನ ವಾಹನಗಳ ಮಾಲೀಕರ ಆರ್ಥಿಕ ಪರಿಸ್ಥಿತಿ ಅರ್ಥ ಮಾಡಿಕೊಂಡು, ಮುಂದುವರಿಯಬೇಕು. ಲಾರಿ ಮಾಲೀಕರು, ಚಾಲಕರು ಯಾವುದೇ ನೈಸರ್ಗಿಕ ವಿಕೋಪಗಳಿಗೆ ಹೆದರದೆ ಕೊರೊನಾ ವೇಳೆ ತಮ್ಮ ಜೀವದ ಹಂಗನ್ನು ತೊರೆದು, ಅಗತ್ಯ ವಸ್ತು ಸಾಗಾಣಿಕೆಯಲ್ಲಿ ವ್ಯತ್ಯಾಸವಾದೇ ಕೆಲಸ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಲಾರಿ ಚಾಲಕರಿಗೆ ಪ್ರತಿ 100 ಕಿ.ಮೀ.ಗೆ ಒಂದರಂತೆ ತಂಗುದಾಣ ನಿರ್ಮಿಸಬೇಕು. ನಮ್ಮ ಬೇಡಿಕೆ ಕುರಿತಂತೆ ಸಾರಿಗೆ ಇಲಾಖೆ ಸೇರಿದಂತೆ ಸಂಬಂಧಿಸಿದ ಇಲಾಖೆಗಳಿಗೆ ಮನವಿ ಮಾಡಿದ್ದು, ಇಲಾಖೆ ಸ್ಪಂದಿಸದ ಹಿನ್ನೆಲೆಯಲ್ಲಿ ಹೋರಾಟ ನಮಗೂ ಅನಿವಾರ್ಯವಾಗಿದೆ ಎಂದು ಸೈಫುಲ್ಲಾ ಹೇಳಿದರು.

ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಕೆ.ಎಸ್. ಮಲ್ಲೇಶಪ್ಪ, ಸಂಘದ ಭೀಮಣ್ಣ, ಎಸ್.ಕೆ. ಮಲ್ಲಿಕಾರ್ಜುನ, ಮಹಾಂತೇಶ ವಿ. ಒಣರೊಟ್ಟಿ, ವಿಜಯಕುಮಾರ, ಸೋಗಿ ಮುರುಗೇಶ, ಲಾರಿ ಮಾಲೀಕರು, ಟ್ರಾನ್ಸ್‌ಪೋರ್ಟ್ ಏಜೆಂಟರು, ಚಾಲಕರು, ನಿರ್ವಾಹಕರು, ಇತರರು ಇದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ರೈತರ ಆದಾಯ ದುಪ್ಪಟ್ಟಿಗೆ ಶೀಘ್ರದಲ್ಲೇ ಪ್ರಯತ್ನ : ಶಾಸಕ ಪ್ರಕಾಶ ಕೋಳಿವಾಡ



ರಾಣೇಬೆನ್ನೂರು

ರಾಣೇಬೆನ್ನೂರು, ಡಿ.24- ಕೃಷಿ ವಿಜ್ಞಾನಿಗಳಿಂದ ಹೊಸ ತಂತ್ರಜ್ಞಾನದ ತಿಳಿವಳಿಕೆ ಕೊಡಿಸಿ, ರೈತರ ಆದಾಯವನ್ನು ದುಪ್ಪಟ್ಟು ಮಾಡುವ ಪ್ರಯತ್ನ ಮಾಡುತ್ತೇನೆ. ಇದು ಕೇವಲ ವೇದಿಕೆಯ ಭಾಷಣವಲ್ಲ, ನಾನೊಬ್ಬ ರೈತ ಮನೆತನದವನಾಗಿ ನನ್ನ ಅವಧಿ ಮುಗಿಯುವದರೊಳಗೆ ಮಾಡಿ ತೋರಿಸುತ್ತೇನೆ ಎಂದು ಶಾಸಕ ಪ್ರಕಾಶ ಕೋಳಿವಾಡ ರೈತರ ಮೇಲೆ ಆಣೆ ಮಾಡಿದರು.

ಇಲ್ಲಿನ ಕೃಷಿ ಇಲಾಖೆ ಏರ್ಪಡಿಸಿದ್ದ ಚೌದರಿ ಚರಣಸಿಂಗ್ ಹುಟ್ಟುಹಬ್ಬದ ಸ್ಮರಣೆಯ ರಾಷ್ಟ್ರೀಯ ರೈತ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕ್ರಿಮಿನಾಶಕ ಉಪಯೋಗಿಸಿ ಬೆಳೆಗೆ ಪೂರಕವಾದ ಕ್ರಿಮಿಕೀಟಗಳನ್ನೂ ಸಹ ನಾವು ನಾಶ ಮಾಡುತ್ತೇವೆ. ಕ್ರಿಮಿನಾಶಕ ಉಪಯೋಗಿಸದೇ ಮೋಹಕ ಬಲೆ ಮೂಲಕ ಬೆಳೆ ರಕ್ಷಣೆ ಮಾಡುವಂತಹ ಹೊಸ ತಂತ್ರಜ್ಞಾನ ಪಡೆದುಕೊಳ್ಳಬೇಕು. ನಮ್ಮ ರೈತರು ತಮ್ಮ ಹಳೆಯ ಪದ್ದತಿಗಳನ್ನು ಬದಲಾವಣೆ ಮಾಡಿಕೊಂಡು ಕಾಲಕ್ಕೆ ತಕ್ಕಂತೆ ಕೃಷಿ ಪದ್ದತಿ ಅಳವಡಿಸಿಕೊಳ್ಳಬೇಕು. ಇದಕ್ಕೆ ಪೂರಕವಾದ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ ಎಂದು ಶಾಸಕರು ಹೇಳಿದರು.

ರೈತರು ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ಪಡೆಯುವ ಪರಿಸ್ಥಿತಿಯನ್ನು ತಪ್ಪಿಸುವಂತೆ ತಾ.ಪಂ ಮಾಜಿ ಅಧ್ಯಕ್ಷ ರವೀಂದ್ರಗೌಡ ಪಾಟೀಲ ಶಾಸಕರಿಗೆ ಮನವಿ ಮಾಡಿದರು.

ಸಹಾಯಕ ಕೃಷಿ ನಿರ್ದೇಶಕಿ ಜಿ.ಶಾಂತಮಣಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವೇದಿಕೆಯಲ್ಲಿ ಕರಿಯಲ್ಲಪ್ಪ ಕೊರಚರ, ಎಂ.ಹೆಚ್.ಪಾಟೀಲ್, ಮಂಜುಳಾ ಬಣಕಾರ್, ನೀಲಕಂಠ ಅಂಗಡಿ, ಹನುಮಂತಪ್ಪ ಕಬ್ಬಾರ ಜಗದೀಶ ಹುಲಗೂರ್, ಸುರೇಶ್ ಹೊನ್ನಪ್ಪಳವರ ಮತ್ತಿತರರಿದ್ದರು. ಇದೆ ಸಂದರ್ಭದಲ್ಲಿ ಸಾವಯವ ಕೃಷಿ, ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು.

# ಉನ್ನತ ಗುರಿ - ಧ್ಯೇಯ ವ್ಯಕ್ತಿತ್ವ ವಿಕಾಸಕ್ಕೆ ದಾರಿದೀಪ



## ಹರಪನಹಳ್ಳಿಯ ಕಾರ್ಯಕ್ರಮದಲ್ಲಿ ರಂಭಾಪುರಿ ಶ್ರೀ ವೀರಸೋಮೇಶ್ವರ ಜಗದ್ಗುರುಗಳು

ಹರಪನಹಳ್ಳಿ, ಡಿ. 24 - ಪ್ರಾಚೀನ ತತ್ವ ಸಿದ್ಧಾಂತ ಬಿಡದೇ ಸಮಾಜಕ್ಕೆ ಸ್ಪಂದಿಸಿ ಜನ ಮಾನಸಕ್ಕೆ ಸನ್ಮಾರ್ಗ ತೋರಿಸುವುದೇ ಸಾಧನೆಯ ಪರಮ ತಪಸ್ಸು. ಪ್ರಕೃತಿ ವಿಕಾಸವನ್ನು ಸೃಷ್ಟಿಸಿದರೆ ಸಂಸ್ಕಾರ ಆದರ್ಶ ವ್ಯಕ್ತಿಗಳನ್ನು ಸೃಷ್ಟಿಸುತ್ತದೆ. ಉನ್ನತವಾದ ಗುರಿ ಮತ್ತು ಧ್ಯೇಯ ವ್ಯಕ್ತಿತ್ವ ವಿಕಾಸಕ್ಕೆ ದಾರಿದೀಪ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಇಲ್ಲಿನ ತೆಗ್ಗಿನಮಠ ಸಂಸ್ಥಾನದಲ್ಲಿ ನಿನ್ನೆ ಜರುಗಿದ ಲಿಂ. ಚಂದ್ರಮೌಳೀಶ್ವರ ಶ್ರೀಗಳವರ 9ನೇ ವರ್ಷದ ಪುಣ್ಯ ಸ್ಮರಣೋತ್ಸವ ಹಾಗೂ ವರಸದ್ಯೋಜಾತ ಶ್ರೀಗಳ ಪಟ್ಟಾಧಿಕಾರದ 8ನೇ ವರ್ಷದ ವಾರ್ಷಿಕೋತ್ಸವ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಮನುಷ್ಯನಲ್ಲಿ ಅರಿವು-ಮರವು ಎರಡೂ ಇರುತ್ತವೆ. ಅರಿವನ್ನು ಜಾಗೃತಗೊಳಿಸಿಕೊಂಡು ಬಂದಾಗ ಮಾತ್ರ ಬದುಕು ಹಸನಾಗುತ್ತದೆ. ಪರಿಶ್ರಮದ ಜ್ಞಾನ ಮನುಷ್ಯನಿಗೆ ಜೀವನದಲ್ಲಿ ಉನ್ನತಿ ಸಾಧಿಸಲು ಸಾಧ್ಯವಿದೆ. ಖಾದಿ, ಖಾಕಿ ಮತ್ತು ಕಾವಿ ಜನಾಂಗವು ನಿರ್ಮಲ ಮನಸ್ಸಿನಿಂದ ಕಾಯಕ ಮಾಡಿದರೆ ಜನ ಕಲ್ಯಾಣದ ಜೊತೆಗೆ ಲೋಕ ಕಲ್ಯಾಣಾರ್ಥವಾಗುವುದು. ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಮುಖ್ಯ. ಯಾವುದೇ ವಿಶ್ವ ವಿದ್ಯಾಲಯ ಕಲಿಸಿಕೊಡದೇ ಇರುವ ಜ್ಞಾನವನ್ನು ಜೀವನಾನುಭವ ಮನುಷ್ಯನಿಗೆ ಕಲ್ಪಿಸಿಕೊಡುತ್ತದೆ. ಅಂತರಂಗ ಪರಿಶುದ್ಧಗೊಳಿಸುವ ಶಕ್ತಿ ಶ್ರೀ ಗುರುವಿಗೆ ಇದೆ. ಅಕ್ಷರದ ಜ್ಞಾನವು ಅಕ್ಷಯದ ಜ್ಞಾನ ದೀವಿಗೆ ಎಂದು ಹೇಳಿದರು.

ನೇತೃತ್ವ ವಹಿಸಿದ್ದ ತೆಗ್ಗಿನಮಠ ಸಂಸ್ಥಾನದ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ವ್ಯಕ್ತಿ ಜೀವನದಲ್ಲಿ ಸುವರ್ಣ ಸಂಪಾದಿಸದಿದ್ದರೂ ಚಿಂತೆಯಿಲ್ಲ. ಆದರೆ ಸದ್ಗುಣಗಳನ್ನು ಸಂಪಾದಿಸಿಕೊಂಡು ಬಾಳಬೇಕು. ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ನಿಯಮಗಳು ಸಾರ್ವಕಾಲಿಕವಾಗಿ ಶಾಶ್ವತವಾಗಿರುತ್ತವೆ ಎಂದರು.

ಸಮಾರಂಭವನ್ನು ಉದ್ಘಾಟಿಸಿದ ಶಾಸಕರಾದ ಶ್ರೀಮತಿ ಲತಾ ಮಲ್ಲಿಕಾರ್ಜುನ ಮಾತನಾಡಿ, ಚಂದ್ರಶೇಖರ ಶ್ರೀಗಳವರ ಕಠಿಣ ಪರಿಶ್ರಮ ಪ್ರಯತ್ನ ಮತ್ತು ಇಂದಿನ ವರಸದ್ಯೋಜಾತ ಶ್ರೀಗಳವರ ಕ್ರಿಯಾಶೀಲ ಬದುಕು ಸಮಾಜ ಸಂವರ್ಧನೆಗೆ ಬಹು ದೊಡ್ಡ ಶಕ್ತಿಯಾಗಿದೆ ಎಂದು ಶ್ಲಾಘಿಸಿದರು.

ತೆಗ್ಗಿನಮಠ ಸಂಸ್ಥಾನದ ಆಡಳಿತಾಧಿಕಾರಿ ಡಾ.ಟಿ.ಎಂ. ಚಂದ್ರಶೇಖರಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹಾವೇರಿ ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಡಿ.ವೈ.ಎಸ್.ಪಿ. ವೆಂಕಟಪ್ಪ ನಾಯಕ, ಟಿ.ಎಂ. ಶಿವಕುಮಾರಸ್ವಾಮಿ, ಪಿ.ಬಿ. ಗೌಡ್ರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಮುರುಗೇಶ ಆರಾಧ್ಯ, ಡಾ.ಕೆ.ಎಂ.ಮಂಜುನಾಥ, ಸಿ.ಹೆಚ್.ಎಂ. ಗಂಗಾಧರ ವಿಶೇಷ ಆಹ್ವಾನಿತರಾಗಿದ್ದರು. ಡಾ. ಟಿ.ಎಂ. ನಟರಾಜ, ಟಿ.ಎಂ. ಚಂದ್ರಕಾಂತ, ಟಿ.ಎಂ. ಮಂಜೇಶ್ವರ ಅವರು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು.

ಎಮ್ಮಿಗನೂರು ಹಂಪಿ ಸಾವಿರದೇವರ ಮಠದ ವಾಮದೇವ ಮಹಾಂತ ಶಿವಾಚಾರ್ಯ ಸ್ವಾಮಿಗಳು ಶಿಕ್ಷಣ ಧರ್ಮ ಪೀಠಗಳ ಪರಂಪರೆ ಕುರಿತು ಉಪದೇಶಾಮೃತವನ್ನಿತ್ತರು. ಕವಲೇದುರ್ಗ ಭುವನಗಿರಿ ಸಂಸ್ಥಾನದ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು.

ಕೊಟ್ಟೂರು ಕಟ್ಟಿಮನಿ ಹಿರೇಮಠದ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಸಿ.ಎಂ. ಕೊಟ್ರಯ್ಯ ಸ್ವಾಗತಿಸಿದರು. ಶಿಕ್ಷಕ ಎನ್. ದ್ವಾರಕೀಶರೆಡ್ಡಿ ನಿರೂಪಿಸಿದರು.

# ಸುವರ್ಣ ಕರ್ನಾಟಕ ವೇದಿಕೆಯಿಂದ ರಾಜ್ಯೋತ್ಸವ



ದಾವಣಗೆರೆ, ಡಿ. 24- ಸುವರ್ಣ ಕರ್ನಾಟಕ ವೇದಿಕೆಯ ಗ್ರಾಮ ಘಟಕದ ವತಿಯಿಂದ ಹೊನ್ನಮರಡಿ, ಆಂಜನೇಯ ನಗರ ಕಾರಿಗನೂರು ಕ್ರಾಸ್‌ನಲ್ಲಿ 68ನೇ ಕನ್ನಡ ರಾಜ್ಯೋತ್ಸವವನ್ನು ನಿವೃತ್ತ ಯೋಧರಿಂದ ಧ್ವಜಾರೋಹಣ ನೆರವೇರಿಸುವ ಮೂಲಕ ಆಚರಿಸಲಾಯಿತು.

ನಿವೃತ್ತ ಯೋಧರಾದ ಚನ್ನಬಸವನಗೌಡ ಮಾತನಾಡಿ, ಈ ದಿನಗಳಲ್ಲಿ ಹೆಚ್ಚಿನ ಮಕ್ಕಳು ಇಂಜಿನಿಯರ್, ಡಾಕ್ಟರ್ ಅಂತ ಓದುವ ಮೂಲಕ ಹುದ್ದೆಗಳಿಗೆ ಹೋಗುತ್ತಿರುವುದು ಹೆಚ್ಚಾಗಿದ್ದು, ದೇಶ ಸೇವೆಗೆಂದು ಒಂದು ದೇಶದ ಗಡಿ ಕಾಯುವ ಆಯ್ಕೆ ಮಾಡಿಕೊಳ್ಳುವ ಮೂಲಕ ಮುಂದಾಗಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ನಿವೃತ್ತ ಯೋಧ ಹೆಚ್. ಸುರೇಶ್‌ರಾವ್, ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್, ಗ್ರಾಮ ಘಟಕದ ಅಧ್ಯಕ್ಷ ಬಸವರಾಜ್, ಗ್ರಾಮ ಘಟಕದ ಗೌರವ ಅಧ್ಯಕ್ಷ ಗಂಗಾಧರಪ್ಪ, ಅಂಜಿನಪ್ಪ, ಕೆ. ರೇವಣಸಿದ್ದೇಶ ನಮ್ಮ ಜೈ ಕರುನಾಡು ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಮಂಜುನಾಥ್‌ಗೌಡ ಮತ್ತು ಇತರರು ಭಾಗವಹಿಸಿದ್ದರು.


# ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ಶಿವಾನುಭವ ಗೋಷ್ಠಿ

ದಾವಣಗೆರೆ, ಡಿ. 24- ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಡಿದ್ದು ದಿನಾಂಕ 26ರ ಮಂಗಳವಾರ ಬೆಳಿಗ್ಗೆ 11.30ಕ್ಕೆ ಗಂಟೆಗೆ 274ನೇ ಹೊಸ್ತಿಲು ಹುಣ್ಣಿಮೆ, ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಕಲ್ಲಯ್ಯಜ್ಜ (ಶ್ರೀ ವೀರೇಶ್ವರ ಪುಣ್ಯಾಶ್ರಮ) ವಹಿಸುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಶಾಮನೂರು ಶಿವಶಂಕರಪ್ಪ, ಅಥಣಿ ಎಸ್. ವೀರಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಅಣಬೇರು ರಾಜಣ್ಣ, ದೇವರಮನೆ ಶಿವಕುಮಾರ್, ಜೆ.ಎನ್. ಕರಿಬಸಪ್ಪ, ಜಿ.ಹೆಚ್. ಯಲ್ಲಪ್ಪ, ಎ.ಎಸ್. ಸಿದ್ದಲಿಂಗಸ್ವಾಮಿ ಆಗಮಿಸುವರು.

# ಇಂದಿನಿಂದ ರಾಜನಹಳ್ಳಿ ಶ್ರೀಗಳ 2ನೇ ಹಂತದ ರಾಜ್ಯ ಪ್ರವಾಸ



ಮಲೇಬೆನ್ನೂರು, ಡಿ.24- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ 2024ರ ಫೆಬ್ರವರಿ 8 ಮತ್ತು 9 ರಂದು ಹಮ್ಮಿಕೊಂಡಿರುವ 6ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನಾಳೆ ದಿನಾಂಕ 25 ರಿಂದ ಜನವರಿ 8 ರವರೆಗೆ 2ನೇ ಹಂತದ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ.

ನಾಳೆ ದಿನಾಂಕ 25ರ ಸೋಮವಾರ ಬೆಳಿಗ್ಗೆ 10ಕ್ಕೆ ಹೊನ್ನಾಳಿ, ಮಧ್ಯಾಹ್ನ 1 ಗಂಟೆಗೆ ನ್ಯಾಮತಿ ಮತ್ತು ಸಂಜೆ 4 ಗಂಟೆಗೆ ಶಿಕಾರಿಪುರದಲ್ಲಿ ಹಾಗೂ ದಿನಾಂಕ 26ಕ್ಕೆ ಸೊರಬ, ಸಾಗರ, ಹೊಸನಗರ, ದಿನಾಂಕ 27ಕ್ಕೆ ಶಿವಮೊಗ್ಗ, ಭದ್ರಾವತಿ, ಚನ್ನಗಿರಿ, ದಿನಾಂಕ 28ಕ್ಕೆ ಅಜ್ಜಂಪುರ, ತರೀಕೆರೆ, ಕಡೂರು, ದಿನಾಂಕ 29ಕ್ಕೆ ಚಿಕ್ಕಮಗಳೂರಿನಲ್ಲಿ ಎನ್.ಆರ್.ಪುರ, ಶೃಂಗೇರಿ, ಕೊಪ್ಪ, ದಿನಾಂಕ 30ಕ್ಕೆ ಹಾಸನದಲ್ಲಿ ಜಿಲ್ಲಾ ವ್ಯಾಪ್ತಿಯ ಪೂರ್ವಭಾವಿ ಸಭೆಗಳನ್ನು ಶ್ರೀಗಳು ನಡೆಸಲಿದ್ದಾರೆ.

ದಿನಾಂಕ 31ಕ್ಕೆ ಕೊಡಗುರ, ಜನವರಿ 1 ರಿಂದ 8 ರವರೆಗೆ ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿದ್ದಾರೆ.

# ಜಗಳೂರಿನಲ್ಲಿ ಬೃಹತ್ ಉದ್ಯೋಗ ಮೇಳ

## ಸಾವಿರಾರು ವಿದ್ಯಾರ್ಥಿಗಳಿಗೆ ಉದ್ಯೋಗ : ಸಂಸದ ಜಿ.ಎಂ. ಸಿದ್ದೇಶ್ವರ



ಜಗಳೂರು, ಡಿ.24- ಯುವಕರಿಗೆ, ವಿದ್ಯೆ ಮತ್ತು ಉದ್ಯೋಗ ಎರಡೂ ಮುಖ್ಯವಾಗಿದ್ದು, ಜಿ.ಎಂ. ಟ್ರಸ್ಟ್ ವತಿಯಿಂದ ಸಾವಿರಾರು ಉದ್ಯೋಗ ಕಲ್ಪಿಸಿ ಕೊಡಲಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದರು.

ಪಟ್ಟಣದ ನಾಲಂದ ಕಾಲೇಜು ಆವರಣದಲ್ಲಿ ಜಿ. ಮಲ್ಲಿಕಾರ್ಜುನಪ್ಪ, ಹಾಲಮ್ಮ ಚಾರಿಟಿ ಫೌಂಡೇಶನ್ ಟ್ರಸ್ಟ್ ಮತ್ತು ನಲಂದ ಪದವಿ ಪೂರ್ವ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉದ್ಯೋಗ ಮಹಿಳಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಶಿಕ್ಷಣ, ಆರೋಗ್ಯ ಶಿಬಿರಗಳು ಮತ್ತು ಬಿಸಿಊಟ ಪೂರೈಸುವ ಯೋಜನೆ ಸೇರಿದಂತೆ ನಮ್ಮ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಹಲವಾರು ಸಮಾಜಮುಖಿ ಕಾರ್ಯಗಳನ್ನು ನೆರವೇರಿಸಲಾಗುತ್ತಿದೆ ಎಂದರು.

ಪ್ರಸ್ತುತ ಬರಪೀಡಿತ ಜಗಳೂರು ತಾಲ್ಲೂಕಿನಲ್ಲಿ ಕ್ಷೇತ್ರದ ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಅವರ ಮನವಿ ಮೇರೆಗೆ ಉದ್ಯೋಗ ಮೇಳವನ್ನು ಹಮ್ಮಿಕೊಂಡಿದ್ದು, ಸುಮಾರು ಮೂರು ಸಾವಿರ ನಿರುದ್ಯೋಗಿ ಯುವಕರು ನೋಂದಣಿ ಮಾಡಿಕೊಂಡಿದ್ದಾರೆ. 52 ಕಂಪನಿಗಳು ಉದ್ಯೋಗ ನೀಡಲು ಈ ಮೇಳದಲ್ಲಿ ಭಾಗವಹಿಸಿವೆ. ಸುಮಾರು 6 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಕಲ್ಪಿಸಿಕೊಡಲಾಗಿದ್ದು ಈ ಕ್ಷೇತ್ರದ ಸಾವಿರಾರು ಯುವಕರಿಗೆ ಉದ್ಯೋಗ ಲಭಿಸಲಿದೆ ಎಂದರು.

ಕಡಿಮೆ ವೇತನದಲ್ಲಿ ಬೆಂಗಳೂರಿನಂತಹ ನಗರದಲ್ಲಿ ಜೀವಿಸುವುದು ತುಂಬಾ ಕಷ್ಟ. ಆದ್ದರಿಂದ ಖಾಸಗಿ ಕಂಪನಿಗಳು ನಮ್ಮ ಯುವಕರಿಗೆ ಉದ್ಯೋಗ ನೀಡುವ ಜೊತೆಗೆ ಉತ್ತಮ ವೇತನ ಹಾಗೂ ವಸತಿ ಸೌಕರ್ಯವನ್ನು ಕಲ್ಪಿಸಿ ಕೊಡಬೇಕೆಂದು ಪ್ರತಿಷ್ಠಿತ ಕಂಪನಿಗಳಿಗೆ ಮನವಿ ಮಾಡಿಕೊಂಡರು.

ಕೇಂದ್ರ ಸರ್ಕಾರದ ಅಭಿವೃದ್ಧಿಗಳನ್ನು ಬಿಂಬಿಸುವ ವಿಕಸಿತ ಸಂಕಲ್ಪ ಯಾತ್ರೆ ತಾಲ್ಲೂಕಿನಲ್ಲಿ ಸಂಚರಿಸಲಿದ್ದು ಯುವಕರು ಹೆಚ್ಚಿನ ಮಾಹಿತಿ ಪಡೆಯುವ ಮೂಲಕ ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಬರಪೀಡಿತ ತಾಲ್ಲೂಕಿನ 57 ಕೆರೆ ತುಂಬಿಸುವ ಯೋಜನೆ ತುಪ್ಪದಹಳ್ಳಿಗೆ ನಿಂತು ಹೋಯಿತು. ಮುಂದಕ್ಕೆ ಬರಲೇ ಇಲ್ಲ, ಇದು ನನ್ನ ಮತ್ತು ಮಾಜಿ ಶಾಸಕ ರಾಮಚಂದ್ರ ಅವರ ದುರದೃಷ್ಟ. ಮುಂದಿನ ದಿನಗಳಲ್ಲಿ ಯೋಜನೆಯ ಪೂರ್ಣಗೊಳ್ಳುವ ವಿಶ್ವಾಸವಿದೆ. ಭದ್ರಾ ಮೇಲ್ದಂಡೆ ಯೋಜನೆಗೆ 1600 ಕೋಟಿ ಮಂಜೂರಾದರು ಹಣ ಬಿಡುಗಡೆಯಾಗಲಿಲ್ಲ. ಯೋಜನೆಗಳ ಜಾರಿಗೆ ಪ್ರಯತ್ನ ಮುಂದುವರಿಸುತ್ತೇವೆ ಎಂದು ಸಂಸದ ಸಿದ್ದೇಶ್ವರ ತಿಳಿಸಿದರು.

ಉದ್ಯೋಗ ಮೇಳದ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾಜಿ ಶಾಸಕ ಎಸ್.ವಿ.ರಾಮಚಂದ್ರ, ನಮ್ಮ ಮನವಿಯ ಮೇರೆಗೆ ಜಿ.ಎಂ. ಟ್ರಸ್ಟ್ ಯುವಕರಿಗೆ ಮನೆ ಬಾಗಿಲಿಗೆ ಉದ್ಯೋಗ ಕಲ್ಪಿಸುವ ಅವಕಾಶವನ್ನು ಕಲ್ಪಿಸಿದ್ದು, ಇದರ ಸದುಪಯೋಗವನ್ನು ನಿರುದ್ಯೋಗಿ ಯುವಕರು ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಸಮಾರಂಭದಲ್ಲಿ ನಾಲಂದ ಕಾಲೇಜು ಪ್ರಾಂಶುಪಾಲ ಸಿ. ತಿಪ್ಪೇಸ್ವಾಮಿ, ಸಂಸದರ ಪುತ್ರ ಜಿ.ಎಸ್ ಅನಿತ್‌ಕುಮಾರ್, ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ ಮಹೇಶ್, ಮಾಜಿ ಜಿ.ಪಂ. ಸದಸ್ಯರಾದ ಎಸ್. ಕೆ. ಮಂಜುನಾಥ್, ಹೆಚ್.ನಾಗರಾಜ್, ಮುಖಂಡರಾದ ಶಶಿಧರ್, ಕೃಷ್ಣಮೂರ್ತಿ, ಶಿವಕುಮಾರ್ ಸ್ವಾಮಿ, ಪುರುಶೋತ್ತಮ್, ಪ.ಪಂ. ಸದಸ್ಯರಾದ ಆರ್.ತಿಪ್ಪೇಸ್ವಾಮಿ, ನಿರ್ಮಲ ಕುಮಾರಿ, ದೇವರಾಜ್, ನವೀನ್ ಕುಮಾರ್, ಪಾಪಲಿಂಗಪ್ಪ ಮುಂತಾದವರು ಇದ್ದರು.

# ಕೊಡದಗುಡ್ಡದಲ್ಲಿ ನಾಳೆ ಕಡೆ ಕಾರ್ತಿಕೋತ್ಸವ



ಜಗಳೂರು, ಡಿ.24- ತಾಲ್ಲೂಕಿನ ಕೊಡದಗುಡ್ಡದ ಶ್ರೀ ವೀರ ಭದ್ರಸ್ವಾಮಿಯ ಕಡೆ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 26 ರ ಮಂಗಳವಾರ ಸಂಜೆ 7.30 ರಿಂದ ಪ್ರಾರಂಭವಾಗಿ ರಾತ್ರಿ 11ರವರೆಗೆ ನಡೆಯಲಿದೆ.

# ಕಲ್ಲೇದೇವರಪುರದಲ್ಲಿ ಇಂದು ಕಲ್ಲೇಶ್ವರ ಸ್ವಾಮಿಯ ಕಾರ್ತಿಕೋತ್ಸವ

ಜಗಳೂರು ತಾಲ್ಲೂಕು ಕಲ್ಲೇದೇವರಪುರ ಗ್ರಾಮದ ಶ್ರೀ ಕಲ್ಲೇಶ್ವರ ಸ್ವಾಮಿಯ ಕಾರ್ತಿಕ ಮತ್ತು ಹಿಟ್ಟಿನ ಹುಣ್ಣಿಮೆ ಮಹೋತ್ಸವ ಕಾರ್ಯಕ್ರಮದಲ್ಲಿ ಇಂದು ರಾತ್ರಿ ಕಾರ್ತಿಕೋತ್ಸವ ಮತ್ತು ನಾಳೆ ಮಂಗಳವಾರ ಶ್ರೀ ಕಲ್ಲೇಶ್ವರ ಸ್ವಾಮಿಯ ಹಿಟ್ಟಿನ ಹುಣ್ಣಿಮೆ ಮಹೋತ್ಸವ ನಡೆಯಲಿದೆ.

# ಕ್ರೀಡೆ ದೈಹಿಕ, ಮಾನಸಿಕ ಸದೃಢತೆಗೆ ಪೂರಕ : ಜಗಳೂರು ಶಾಸಕ ಬಿ.ದೇವೇಂದ್ರಪ್ಪ ಪ್ರಶಂಸೆ



ಜಗಳೂರು, ಡಿ.24- ಕ್ರೀಡೆಗಳು ದೈಹಿಕ, ಮಾನಸಿಕ ಸದೃಢತೆಗೆ ಪೂರಕವಾಗಿವೆ.ಐಪಿಎಲ್, ಕೆಪಿಎಲ್, ಮಾದರಿಯಲ್ಲಿ ಜೆಪಿಎಲ್ ಕ್ರಿಕೆಟ್ಟನ್ನು ಪಟ್ಟಣದಲ್ಲಿ ಆಯೋಜಿಸಿರುವ ಫ್ರಾಂಚೈಸಿಗಳ ಹಾಗೂ ಆಯೋಜಕರ ಕಾರ್ಯ ಶ್ಲಾಘನೀಯ ಎಂದು ಶಾಸಕ ಬಿ.ದೇವೇಂದ್ರಪ್ಪ ಪ್ರಶಂಸಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಪ್ರಪ್ರಥಮ ಬಾರಿಗೆ ಆಯೋಜಿಸಿರುವ ಜಗಳೂರು ಪ್ರೀಮಿಯರ್ ಲೀಗ್ ಕ್ರಿಕೆಟ್ (ಜೆಪಿಎಲ್) ಪಂದ್ಯಾವಳಿಗೆ ಚಾಲನೆ ನೀಡಿ, ಅವರು ಮಾತನಾಡಿದರು.

ಬರದನಾಡಿನ ಇಂದಿನ ಕ್ರಿಕೆಟ್ ಪಂದ್ಯಾವಳಿ ರಾಜ್ಯ ಮಟ್ಟದ ಪಂದ್ಯಾವಳಿಯಾಗಿ ಭಾಸವಾಗುತ್ತದೆ. ತಾಲ್ಲೂಕಿನ ಕ್ರಿಕೆಟ್ ಪ್ರೇಮಿಗಳು ಪ್ರೇಕ್ಷಕರಾಗಿ ಮನೆಯಲ್ಲಿ ಕುಳಿತು ಯೂಟೂಬ್ ಚಾನೆಲ್‌ನಲ್ಲಿ ಲೈವ್ ಸ್ಪೋರ್ಟ್ಸ್ ವೀಕ್ಷಣೆಗೆ ಅವಕಾಶ ಕಲ್ಪಿಸಿರುವುದು ವಿಶೇಷವಾಗಿದೆ.

ಸಮಾನತೆ ಹಾಗೂ ಜಾತ್ಯತೀತ ಮನೋಭಾವ ಮೂಡುವುದು ಕ್ರೀಡೆಯಿಂದ ಮಾತ್ರ ಸಾಧ್ಯ.ಸೋಲು-ಗೆಲುವು ಸಹಜ ಭಾಗವಹಿಸುವಿಕೆ ಮುಖ್ಯವಾಗಿದೆ. ಸಮಾನವಾಗಿ ಸ್ವೀಕರಿಸಿ ತಮ್ಮ ಪ್ರತಿಭೆ ಪ್ರದರ್ಶಿಸಬೇಕು ಎಂದು ಶಾಸಕರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಬಿ. ಮಹೇಶ್ವರಪ್ಪ, ಮಾಳಮ್ಮನಹಳ್ಳಿ ವೆಂಕಟೇಶ್, ಅನೂಪ್ ರೆಡ್ಡಿ, ಬಂಗ್ಲೆ ಫರ್ವೇಜ್, ಎಂ.ಡಿ.ಕೀರ್ತಿಕುಮಾರ್, ಆಯೋಜಕರಾದ ನಾಗರಾಜ್, ಶಾರೂಕ್, ಪೃಥ್ವಿ, ಕುಮಾರ್, ನವಾಜ್, ರೋಷನ್, ಬರ್ಕತ್ ಅಲಿ, ಮುಸ್ತೂರಪ್ಪ, ಮುಂತಾದವರು ಇದ್ದರು.

# ಜಿಟ್ಟಿನಕಟ್ಟಿ ಮಂಜುನಾಥ್‌ಗೆ ಪ್ರಶಸ್ತಿ



ಹರಪನಹಳ್ಳಿ, ಡಿ.24- ಬಳ್ಳಾರಿ ನಗರದ ಹೊಂಗಿರಣ ಸಾಂಸ್ಕೃತಿಕ ಸಮುಚ್ಚಯ ಸಭಾಭವನದಲ್ಲಿ ಅಕ್ಷಯ ಫೌಂಡೇಶನ್ ಹೈದ್ರಾಬಾದ್ ಮತ್ತು ಕರ್ನಾಟಕ ರಾಜ್ಯ ವಾಲ್ಮೀಕಿ ನೌಕರರ ಒಕ್ಕೂಟ ಇವರ ವತಿಯಿಂದ ಹರಪನಹಳ್ಳಿ ತಾಲ್ಲೂಕಿನ ನ್ಯಾಯವಾದಿ, ಉಪನ್ಯಾಸಕ ಜಿಟ್ಟಿನಕಟ್ಟಿ ಹೆಚ್.ಕೆ.ಮಂಜುನಾಥ್ ಅವರಿಗೆ ಶ್ರೀ ವಾಲ್ಮೀಕಿ ಬ್ರಹ್ಮಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಭಾರತ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ವಾಲ್ಮೀಕಿ ನೌಕರರ ಒಕ್ಕೂಟದ ರಾಜ್ಯಾಧ್ಯಕ್ಷ ಟಿ.ಮೋಹನ ಕಿಶೋರ್, ನಿವೃತ್ತ ಮುಖ್ಯ ಶಿಕ್ಷಕ ಬಾಲೇನಹಳ್ಳಿ ರೇವಣಸಿದ್ದಪ್ಪ, ಪಿಡಿಓ ಮಾರುತೇಶ್ ಕೆ, ನ್ಯಾಯವಾದಿ ಬಂಡ್ರಿ ಕೆ.ಆನಂದ, ಗ್ರಾಮ ಲೆಕ್ಕಾಧಿಕಾರಿ ಹೆಚ್.ಅರುಣಕುಮಾರ್ ಸೇರಿದಂತೆ ಇತರರು ಇದ್ದರು.

# ಶಾಸಕ ಶಾಂತನಗೌಡರ 75ನೇ ವರ್ಷದ ಹುಟ್ಟು ಹಬ್ಬ ಅರ್ಥಪೂರ್ಣ ಆಚರಣೆಗೆ ತೀರ್ಮಾನ



ಹೊನ್ನಾಳಿ, ಡಿ.24- ಹಿರಿಯ ಶಾಸಕ ಡಿ.ಜಿ.ಶಾಂತನಗೌಡ ಅವರ 75ನೇ ಹುಟ್ಟುಹಬ್ಬದ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಜನವರಿ ತಿಂಗಳಲ್ಲಿ ಶಾಂತನಗೌಡರ ಅಭಿಮಾನಿ ಬಳಗದ ವತಿಯಿಂದ ವಿಜೃಂಭಣೆ ಮತ್ತು ಅರ್ಥ ಪೂರ್ಣವಾಗಿ ಆಚರಿಸಲು ತೀರ್ಮಾನಿಸಿದ್ದು, ಇದರ ಪೂರ್ವಭಾವಿ ಸಭೆಯನ್ನು ಗೊಲ್ಲರಹಳ್ಳಿಯ ತರಳಬಾಳು ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಶಾಂತನಗೌಡರ 75ನೇ ಹುಟ್ಟುಹಬ್ಬದ ಅಮೃತ ಮಹೋತ್ಸವಕ್ಕೆ ಎಲ್ಲಾ ಸಮಾಜದ ಸ್ವಾಮೀಜಿಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ ಗಣ್ಯರನ್ನು ಕರೆಯಲು ತೀರ್ಮಾನಿಸಲಾಗಿದೆ.

ಅಮೃತ ಮಹೋತ್ಸವವನ್ನು ಅರ್ಥ ಪೂರ್ಣವಾಗಿ ಆಚರಿಸಲು ಹುಟ್ಟು ಹಬ್ಬದ ಸಮಿತಿಯನ್ನು ಶೀಘ್ರವೇ ರಚನೆ ಮಾಡಲಾಗುವುದು. ಕಾರ್ಯಕ್ರಮದ ದಿನಾಂಕ ಮತ್ತು ಸ್ಥಳ ನಿಗದಿ ಕುರಿತಂತೆ ಮುಂದಿನ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು.

ಶಾಸಕರ ಹುಟ್ಟು ಹಬ್ಬದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು, ರಕ್ತದಾನ ಶಿಬಿರ, ಶಾಸಕರ ಕುರಿತಾದ ಕಿರುಚಿತ್ರ ಪ್ರದರ್ಶನ, ಕ್ರೀಡಾಕೂಟ, ಸಂಗೀತ ದಿಗ್ಗಜರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಸೇರಿದಂತೆ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಪೂರ್ವಭಾವಿ ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಮಂಜಪ್ಪ, ಡಾ. ಈಶ್ವರ್ ನಾಯ್ಕ್, ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಕೆಂಗಲಹಳ್ಳಿ ಷಣ್ಮುಖಪ್ಪ, ಹನುಮನಹಳ್ಳಿ ಬಸವರಾಜಪ್ಪ, ಶಿವಪ್ಪ ನ್ಯಾಮತಿ, ಎಚ್.ಎ.ಗದ್ದಿಗೇಶ್, ಎಚ್.ಎ. ಉಮಾಪತಿ, ಡಿ.ಜಿ.ವಿಶ್ವನಾಥ್, ನುಚ್ಚಿನ ವಾಗೀಶ್, ಚೀಲೂರು ವಾಜಿದ್, ಆರ್.ನಾಗಪ್ಪ, ಸಣ್ಣಕ್ಕಿ ಬಸವನಗೌಡ, ಪುಷ್ಪಲತಾ ರವೀಶ್, ವನಜಾಕ್ಷಮ್ಮ, ಬೆನಕನಹಳ್ಳಿ ವೀರಣ್ಣ, ದಿಡಗೂರು ಎ.ಜಿ.ಪ್ರಕಾಶ್, ಅರಬಗಟ್ಟೆ ರಮೇಶ್, ಕುಳಗಟ್ಟೆ ಎಂ.ಆರ್.ಹನುಮಂತಪ್ಪ, ಸುಲೇಮಾನ್ ಖಾನ್, ತಕ್ಕನಹಳ್ಳಿ ಸುರೇಶ್, ಮಾಸಡಿ ಗಜೇಂದ್ರಪ್ಪ, ಅರಕೆರೆ ಮಧುಗೌಡ, ದಿಡಗೂರು ರುದ್ರೇಶ್, ಬಿದರಗಡ್ಡೆ ನಾಗರಾಜ್, ಡಿ.ಸುರೇಶ್, ಜಗದೀಶ್ ಕಡದಕಟ್ಟೆ, ಕೊಡತಾಳ್ ರುದ್ರೇಶ್, ಎಚ್.ಎಸ್.ಕೃಷ್ಣಮೂರ್ತಿ, ಬೇಲಿಮಲ್ಲೂರು ಶಿವಾನಂದ್, ಬೆನಕನಹಳ್ಳಿ ಗಣೇಶ್, ಹೊಟ್ಯಾಪುರ ಮಲ್ಲೇಶ್, ಬಸವನಹಳ್ಳಿ ಪ್ರಕಾಶ್, ತರಗನಹಳ್ಳಿ ಅಶೋಕ್ ಕುಮಾರ್, ಮತ್ತಿತರರು ಉಪಸ್ಥಿತರಿದ್ದರು.

# ಆವರಗೊಳ್ಳದಲ್ಲಿ ನಾಳೆ ವೀರಭದ್ರೇಶ್ವರ ಕಾರ್ತಿಕ

ದಾವಣಗೆರೆ, ಡಿ. 24 - ಶ್ರೀ ಕ್ಷೇತ್ರ ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಮಹಾಸ್ವಾಮಿಯ ಕಡೇ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 26 ರ ಮಂಗಳವಾರ ಜರುಗಲಿದೆ.

ಅಂದು ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ವೀರಭದ್ರಸ್ವಾಮಿ, ಆದಿದೈವ ಶನೇಶ್ವರ ಸ್ವಾಮಿ, ಜಗದ್ಗುರು ರೇಣುಕಾಚಾರ್ಯ ಗದ್ದಿಗೆಗಳಿಗೆ ರುದ್ರಾಭಿಷೇಕ, ಮಹಾಪೂಜೆ ನಡೆಯಲಿದೆ.

ನಂತರ ರಾತ್ರಿ ಶ್ರೀ ವೀರಭದ್ರೇಶ್ವರ, ಶ್ರೀ ರೇವಣಸಿದ್ದೇಶ್ವರ ಹಾಗೂ ಶ್ರೀ ಬೀರಲಿಂಗೇಶ್ವರ ದೇವರುಗಳ ಪಾಲಿಕೆ ಉತ್ಸವವು ದೇವಸ್ಥಾನದಿಂದ ನಂದಿ ಬಸಪ್ಪನ ಕಟ್ಟೆಯವರೆಗೂ ಇಕ್ಕೆಲಗಳಲ್ಲಿ ನಡೆಯುವುದು.

ಬುಧವಾರ ಬೆಳಿಗ್ಗೆ ಬೇಡಿಕೊಂಡ ಭಕ್ತರ ಗುಗ್ಗಳ ಸೇವೆಯೊಂದಿಗೆ ಅಲ್ಲಿಂದ ಹೊರಟು ದೇವಸ್ಥಾನಕ್ಕೆ ಆಗಮಿಸಿ ಕಾರ್ಯಕ್ರಮ ಸಂಪನ್ನಗೊಳ್ಳುವುದೆಂದು ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ಸೇವಾ ಸಂಘದ ಅಧ್ಯಕ್ಷ ಬಿ. ಎಮ್. ಷಣ್ಮುಖಯ್ಯ ತಿಳಿಸಿದ್ದಾರೆ.

ಇಂದಿನಿಂದ ಪ್ರಾರಂಭ
ನೂತನವಾಗಿ ಪ್ರಾರಂಭವಾಗಿರುವ
ಶ್ರೀ ಬಾಲಾಜಿ ಸ್ಯಾರೀಸ್ & ಮಾಚಿಂಗ್ ಸೆಂಟರ್
ಚಾಮರಾಜಪೇಟೆ, ದಾವಣಗೆರೆ-1
❖ಸ್ಯಾರೀಸ್ ❖ ಬ್ಲೌಸ್‌ಪೀಸ್ ❖ಪೆಟಿಕೋಟ್
❖ಟಾಪ್ಸ್ ❖ನೈಟೀಸ್ ❖ಲಗ್ಗೀನ್ಸ್ ❖ಒಳ ಉಡುಪುಗಳು
ಮನ ಮೆಚ್ಚುವ ಸೀರೆ ಹಾಗೂ ಬ್ಲೌಸ್ ಪೀಸ್‌ಗೆ ಭೇಟಿ ಕೊಡಿ.
ಮೊ : 98800 26258, 99039 29805

LADIES PG BUILDING
FOR RENT
ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
Mobi. : 95351 14063,
96203 71544, 97428 35642

# ಬೆಳ್ಳಿ ಹಬ್ಬದ ಸಂಭ್ರಮದಲ್ಲಿ 'ರಶ್ಮಿ' ವಸತಿಯುತ ಶಾಲೆ

ಇಂದು ಕುಟುಂಬದಲ್ಲಿರುವ ಒಂದೋ - ಎರಡೋ ಹೆಣ್ಣು ಮಗುವನ್ನು ಪೋಷಿಸುವುದಕ್ಕೆ, ಶಿಕ್ಷಣ ನೀಡುವುದಕ್ಕೆ ಅನೇಕರು ಹಿಂದೆ ಮುಂದೆ ನೋಡುತ್ತಿದ್ದಾರೆ. ಆದರೆ ಇಲ್ಲೊಂದು ಸಂಸ್ಥೆ ಕಳೆದ 24 ವರ್ಷಗಳಿಂದ ಪ್ರತಿ ವರ್ಷ ಸರಿ ಸುಮಾರು 250 ಬಾಲಕಿಯರಿಗೆ ಆಶ್ರಯ, ಆಹಾರ, ಬಟ್ಟೆ ಮತ್ತು ಶಿಕ್ಷಣ ಇವೆಲ್ಲವನ್ನೂ ಉಚಿತವಾಗಿ ಕೊಟ್ಟು ಪೋಷಿಸುತ್ತಿದೆ. ಅದುವೇ ದಾವಣಗೆರೆ ನಗರದ ಸಮೀಪದಲ್ಲಿರುವ 'ರಶ್ಮಿ' ಬಾಲಕಿಯರ ಸಂಪೂರ್ಣ ಉಚಿತ ವಸತಿಯುತ ಶಾಲೆ. ಇಂದು ರಶ್ಮಿ ಎಂಬುದು ಒಂದು ಕಟ್ಟಡವಾಗಿ ಅಥವಾ ಶಾಲೆಯಾಗಿ ಮಾತ್ರ ಗುರುತಿಸಲ್ಪಡದೇ ಸೌಲಭ್ಯ ವಂಚಿತ, ಶಿಕ್ಷಣ ವಂಚಿತ ಬಾಲಕಿಯರ ಪಾಲಿನ ಆಶಾಕಿರಣವಾಗಿದೆ, ಸ್ಫೂರ್ತಿ ಕಿರಣವಾಗಿದೆ.



ಡಾ. ಡಿ. ಪರ್ವತಪ್ಪ ಮೆಮೋರಿಯಲ್ ಟ್ರಸ್ಟ್ ಈ 'ರಶ್ಮಿ' ಎಂಬ ವಸತಿ ಶಾಲೆಯನ್ನು ಪ್ರಾರಂಭಿಸಿ, ಅದಕ್ಕೆ ಬೇಕಾದ ಕಟ್ಟಡ ಹಾಗೂ ಇತ್ಯಾದಿ ಸೌಲಭ್ಯಗಳನ್ನು ನಿರ್ಮಿಸಿ, ಸಂಪೂರ್ಣ ಉಚಿತವಾಗಿ ಕಳೆದ 25 ವರ್ಷಗಳಿಂದ ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಸಾವಿರಾರು ಬಾಲಕಿಯರು ಈಗಾಗಲೇ ಇದರ ಪ್ರಯೋಜನ ಪಡೆದಿದ್ದಾರೆ. ಈಗ ರಶ್ಮಿಗೆ ಬೆಳ್ಳಿ ಹಬ್ಬದ ಸಂಭ್ರಮ. 2023, ಡಿಸೆಂಬರ್ 24 ರಂದು ಈ ಶಾಲೆಯ ರಜತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿತು.

1993ರ ನವೆಂಬರ್‌ನಲ್ಲಿ ಡಾ. ಡಿ.ಪರ್ವತಪ್ಪನವರ ಜೇಷ್ಠ ಪುತ್ರ ಸುರೇಂದ್ರ ಅವರ ಪುತ್ರಿ ರಶ್ಮಿ ಅಪಘಾತದಿಂದ ದುರ್ಮರಣಕ್ಕೀಡಾದಳು. ರಶ್ಮಿಯ ತಂದೆಯವರಿಗೆ ಅಗಲಿದ ಮಗಳ ನೆನಪಿನಲ್ಲಿ ಮತ್ತು ಹೆಸರಿನಲ್ಲಿ ಶಿಕ್ಷಣ ವಂಚಿತ, ಮೂಲಭೂತ ಸೌಲಭ್ಯ ವಂಚಿತ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿ, ಅವರನ್ನು ಮುಖ್ಯವಾಹಿನಿಗೆ ತಂದು ಸ್ವಾವಲಂಬಿಗಳನ್ನಾಗಿ ಮಾಡಬೇಕು. ಆ ಮೂಲಕ ಸಮಾಜದ ಋಣ ತೀರಿಸಬೇಕು ಎಂಬ ಬಯಕೆಯುಂಟಾಯಿತು. ತಮ್ಮ ತಾಯಿಯೊಂದಿಗೆ ಚರ್ಚಿಸಿ, ಸಹೋದರ ಹಾಗೂ ಸಹೋದರಿಯರೊಡನೆ ಸೇರಿ 1997ರಲ್ಲಿ ಡಾ. ಡಿ. ಪರ್ವತಪ್ಪ ಮೆಮೋರಿಯಲ್ ಟ್ರಸ್ಟ್ ಅನ್ನು ಸ್ಥಾಪಿಸಿದರು.





1998ರಲ್ಲಿ ಒಂದು ಬಾಡಿಗೆ ಕಟ್ಟಡದಲ್ಲಿ ರಶ್ಮಿ ಶಾಲೆ ಪುಟ್ಟದಾಗಿ ಪ್ರಾರಂಭವಾಯಿತು. ಮುಂದೆ 1999ರಲ್ಲಿ ಕುಂದವಾಡದ ಸಮೀಪ ಈಗ ಇರುವ ನಿವೇಶನದಲ್ಲಿ ಸ್ವಂತ ಕಟ್ಟಡದ ಕೆಳಮಹಡಿಯನ್ನು ನಿರ್ಮಿಸಿ, ಒಂದನೇ ತರಗತಿಯನ್ನು ಪ್ರಾರಂಭಿಸಲಾಯಿತು. ನಂತರ ಹಂತ-ಹಂತವಾಗಿ ತರಗತಿಗಳನ್ನು ಮತ್ತು ಅದಕ್ಕೆ ತಕ್ಕಂತೆ ಕೊಠಡಿಗಳನ್ನು ವಿಸ್ತರಿಸಲಾಯಿತು. ಮಕ್ಕಳ ಸಂಖ್ಯೆ ಹೆಚ್ಚಾಗುತ್ತಾ ಬಂದಂತೆ, 2010ರಲ್ಲಿ ಪ್ರತ್ಯೇಕ ಶಾಲಾ ಕಟ್ಟಡವನ್ನು ನಿರ್ಮಿಸಲಾಯಿತು.

ಶಿಕ್ಷಣ ಹಾಗೂ ಮೂಲಭೂತ ಸೌಲಭ್ಯ ವಂಚಿತ ಬಡ / ಅನಾಥ ಬಾಲಕಿಯರನ್ನು ಒಂದನೇ ತರಗತಿಗೆ ದಾಖಲು ಮಾಡಿಕೊಂಡು, ಅವರಿಗೆ ಸಂಪೂರ್ಣ ಉಚಿತವಾಗಿ ಆಹಾರ, ಶಿಕ್ಷಣ, ಬಟ್ಟೆ, ಆರೈಕೆ, ಇವುಗಳೊಂದಿಗೆ ಉತ್ತಮ ಸಂಸ್ಕಾರ ನೀಡಿ, ಅವರನ್ನು ಸುಶಿಕ್ಷಿತರನ್ನಾಗಿಸುವ ಉನ್ನತ ಧ್ಯೇಯದೊಂದಿಗೆ ಈ ರಶ್ಮಿಯು ಕಳೆದ 25 ವರ್ಷಗಳಿಂದ ಸಮಾಜಮುಖಿಯಾಗಿ ಕಾರ್ಯೋನ್ಮುಖವಾಗಿದೆ. ಕಳೆದ 25 ವರ್ಷಗಳಲ್ಲಿ 1500ಕ್ಕೂ ಹೆಚ್ಚು ಬಾಲಕಿಯರಿಗೆ 'ರಶ್ಮಿ' ಬೆಳಕಾಗುತ್ತಿದೆ. ಒಂದು ವರ್ಷದಲ್ಲಿ ಗರಿಷ್ಠ 250 ಮಕ್ಕಳು ಇಲ್ಲಿರುತ್ತಾರೆ. ಪ್ರಸ್ತುತ 13ಕ್ಕೂ ಹೆಚ್ಚು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಇಲ್ಲಿ ಮಮತೆಯಿಂದ ಮತ್ತು ಶ್ರದ್ಧೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇಲ್ಲಿ ಪ್ರವೇಶಾತಿಗೆ ಜಾತಿ, ಮತ, ಧರ್ಮ, ಭಾಷೆ, ಪ್ರಾಂತ್ಯ ಯಾವುದೇ ತಾರತಮ್ಯವಿಲ್ಲದೇ ಸಮಾನತೆಗೆ ಒತ್ತು ನೀಡಲಾಗಿದೆ. ದಾವಣಗೆರೆ ಮಾತ್ರವಲ್ಲದೇ, ಹಾವೇರಿ, ವಿಜಯನಗರ, ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ, ಧಾರವಾಡ, ಮೈಸೂರು, ಗದಗ, ಬೆಂಗಳೂರು, ಉತ್ತರ ಕನ್ನಡ, ಹುಬ್ಬಳ್ಳಿ, ತುಮಕೂರು, ಬಾಗಲಕೋಟೆ, ಕೊಪ್ಪಳ ಹೀಗೆ 16ಕ್ಕೂ ಹೆಚ್ಚು ಜಿಲ್ಲೆಗಳ ಮಕ್ಕಳು ಇಲ್ಲಿದ್ದಾರೆ. ಪ್ರವೇಶ ಬಯಸಿ, ಬಂದವರನ್ನು ಸಂದರ್ಶನ ನಡೆಸಿ, ಅವರಲ್ಲಿ ಅತ್ಯಂತ ಸೌಲಭ್ಯ ವಂಚಿತ ಅರ್ಹ ಮಕ್ಕಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ.

ವಸತಿಯುತ ಶಾಲೆಯಾಗಿರುವುದರಿಂದ ಹೆಣ್ಣು ಮಕ್ಕಳ ಸಂರಕ್ಷಣೆ, ಪೋಷಣೆ ಮತ್ತು ಆರೋಗ್ಯಕ್ಕೆ ಇಲ್ಲಿ ಮೊದಲ ಆದ್ಯತೆ ನೀಡಲಾಗುತ್ತಿದೆ. ಕರ್ನಾಟಕದ ಪಠ್ಯಕ್ರಮದ ಶಾಲಾ ಶಿಕ್ಷಣದೊಂದಿಗೆ ಪೌಷ್ಠಿಕ ಆಹಾರ, ಆಟ, ಮನರಂಜನೆ, ಸಂಗೀತ, ಯೋಗ, ಕಂಪ್ಯೂಟರ್ ಸೇರಿದಂತೆ ವೃತ್ತಿಪರ ಕೌಶಲ್ಯಗಳು ಮತ್ತು ಅಧ್ಯಾತ್ಮಿಕತೆಗೂ ಇಲ್ಲಿ ಮಹತ್ವ ನೀಡಲಾಗುತ್ತಿದೆ. ಶಾಲಾ ಆವರಣದಲ್ಲಿ ಬೆಳೆದಿರುವ ಸಾವಯವ ತರಕಾರಿ, ಸೊಪ್ಪು ಮೊದಲಾದವುಗಳನ್ನು ಮಕ್ಕಳಿಗೆ ಸಮೃದ್ಧವಾಗಿ ಬಳಸಲಾಗುತ್ತಿದ್ದು, ಮಕ್ಕಳೂ ಈ ಕೃಷಿ ಚಟುವಟಿಕೆಯಲ್ಲಿ ಉತ್ಸಾಹದಿಂದ ಭಾಗವಹಿಸುತ್ತಾರೆ.

ಪರಿಶುದ್ಧ ಕುಡಿಯುವ ನೀರು, ಸೋಲಾರ್ ವಾಟರ್ ಹೀಟರ್, ಪರ್ಯಾಯ ವಿದ್ಯುತ್ ವ್ಯವಸ್ಥೆ, ಸಮರ್ಪಕ ವೈದ್ಯಕೀಯ ಸೌಲಭ್ಯ ಹೀಗೆ ಮಕ್ಕಳ ಆರೋಗ್ಯಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳೂ ಇಲ್ಲಿವೆ. ಮಕ್ಕಳ ಭದ್ರತೆಗಾಗಿ 8 ಅಡಿ ಎತ್ತರದ ಮುಳ್ಳು ತಂತಿ ಸಹಿತ ಕಾಂಪೌಂಡ್ ಗೋಡೆ ಮತ್ತು ಸಿ.ಸಿ. ಟಿವಿಯೂ ಇಲ್ಲಿದೆ. ಆಗಾಗ್ಗೆ ಶೈಕ್ಷಣಿಕ ಚಲನಚಿತ್ರಗಳನ್ನು ಮಕ್ಕಳಿಗೆ ಪ್ರದರ್ಶಿಸಲಾಗುತ್ತದೆ. ಗ್ರಂಥಾಲಯ ಸೌಲಭ್ಯವೂ ಇದೆ. ಹೀಗೆ ಯಾವ ಕೊರತೆಯೂ ಆಗದಂತೆ, ಆ ಮಕ್ಕಳಲ್ಲಿ ಯಾವುದೇ ಕೀಳರಿಮೆಗೆ ಅವಕಾಶವಿಲ್ಲದಂತೆ ಮಕ್ಕಳನ್ನು ರೂಪಿಸಲಾಗುತ್ತಿದೆ.

ಮಕ್ಕಳಿಗೆ ಇಲ್ಲಿ ಹತ್ತನೇ ತರಗತಿಯವರೆಗೆ ಅವಕಾಶವಿದೆ. ಹಾಗೆಂದು ಇವರ ಸೇವೆ ಇಲ್ಲಿಗೆ ನಿಂತಿಲ್ಲ. ಪಾಲಕರಿಲ್ಲದ ಅದೆಷ್ಟೋ ಬಾಲಕಿಯರಿಗೆ ಮುಂದಿನ ಶಿಕ್ಷಣಕ್ಕೂ ಈ ಟ್ರಸ್ಟ್ ದಾರಿಮಾಡಿಕೊಟ್ಟಿದೆ. ಇಲ್ಲಿಯ ಬಾಲಕಿಯರಿಗೆ ದಾವಣಗೆರೆಯ ಕೆಲವು ಕಾಲೇಜುಗಳು ಕಡಿಮೆ ವೆಚ್ಚದಲ್ಲಿ ಶಿಕ್ಷಣ ನೀಡುತ್ತಿವೆ. ಆ ಶುಲ್ಕವನ್ನು ಟ್ರಸ್ಟ್ ಭರಿಸುತ್ತಿದೆ.

ರಶ್ಮಿಯ ಮಡಿಲಿನಲ್ಲಿ ಬೆಳೆದ ಎಷ್ಟೋ ಬಾಲಕಿಯರು ಇಂದು ಇಂಜಿನಿಯರ್ ಆಗಿದ್ದಾರೆ. ಒಬ್ಬಳು ಜರ್ಮನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದಾಳೆ. ಇನ್ನು ಕೆಲವರು ಇಂಜಿನಿಯರಿಂಗ್ ಅಧ್ಯಯನ ಮಾಡುತ್ತಿದ್ದಾರೆ. ಕೆಲವರು ಬ್ಯಾಂಕ್‌ನಲ್ಲಿ ನೌಕರಿ ಮಾಡುತ್ತಿದ್ದಾರೆ. ಇನ್ನು ಕೆಲವರು ಬಿ.ಎಸ್ಸಿ ಅಗ್ರಿ, ನರ್ಸಿಂಗ್ ಮೊದಲಾದವುಗಳನ್ನು ಮುಗಿಸಿ ಸ್ವಾವಲಂಬಿಗಳಾಗಿದ್ದಾರೆ.



ಸರ್ಕಾರದ ಅನುದಾನ / ದೇಣಿಗೆಯನ್ನು ಬಯಸದೇ ಡಾ.ಪರ್ವತಪ್ಪನವರ ಕುಟುಂಬ ವರ್ಗ, ಅದರಲ್ಲೂ ಸುರೇಂದ್ರ ಅವರ ಉದಾರ ಕೊಡುಗೆಯಿಂದ ಈ ಶಾಲೆಯನ್ನು ನಿರ್ಮಿಸಲಾಗಿದೆ. ಕ್ರಮೇಣ ಆ ಕುಟುಂಬದ ಇತರರು ಕೂಡಾ ಕೈ ಜೋಡಿಸಲಾರಂಭಿಸಿದರು. ಒಂದು ಮನೆತನ ಇಂತಹ ಒಂದು ಸಂಸ್ಥೆಯನ್ನು ನಡೆಸುತ್ತಿರುವ ನಿದರ್ಶನಗಳು ಅತ್ಯಂತ ವಿರಳ. ಇವರ ಬದ್ಧತೆ ಹಾಗೂ ಪಾವಿತ್ರ್ಯತೆಯನ್ನು ನೋಡಿದ ಕೆಲ ಸಾರ್ವಜನಿಕರು ತಮ್ಮ ದೇಣಿಗೆಯ ಮೂಲಕ ಈ ಸಂಸ್ಥೆಯ ಬೆಳವಣಿಗೆಗೆ ಪೂರಕರಾಗಿದ್ದಾರೆ.

**ರಶ್ಮಿಯ ಸಾಧನೆಗಳು**

2010-11 ರಲ್ಲಿ ಈ ಶಾಲೆಯ ಹತ್ತನೇ ತರಗತಿಯ ಮೊದಲ ಬ್ಯಾಚ್ ಪ್ರಾರಂಭವಾಯಿತು. ಅಂದಿನಿಂದ ಇಲ್ಲಿಯವರಗೆ ಪ್ರತಿ ವರ್ಷ ಎಸ್ಸೆಸ್ಸೆಲ್ಸಿ ಪಬ್ಲಿಕ್ ಪರೀಕ್ಷೆಯಲ್ಲಿ ಇಲ್ಲಿಯ ಮಕ್ಕಳು ಶೇ.100 ರಷ್ಟು ಫಲಿತಾಂಶ ಪಡೆದು, ಶಾಲೆಯು 'ಸಾಧಕ ಶಾಲೆ' ಎಂಬ ಪುರಸ್ಕಾರವನ್ನು ಪಡೆಯುತ್ತಿದೆ.

2017-18ನೇ ಸಾಲಿನಲ್ಲಿ ಈ ಶಾಲೆಯ ಪರಿಸರ ಅಂದರೆ ಇಲ್ಲಿಯ ಮರ, ಗಿಡ, ಹಸಿರು ಎಲ್ಲವನ್ನು ನೋಡಿದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಜಂಟಿಯಾಗಿ 'ಪರಿಸರ ಮಿತ್ರ ಶಾಲೆ' ಎಂಬ ಪ್ರತಿಷ್ಠಿತ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಡಾ.ಪಿ.ಸುರೇಂದ್ರ, ಡಾ.ಪಿ. ನಾಗರಾಜ್, ಶ್ರೀಮತಿ ನಂಜಮ್ಮ ಪರ್ವತಪ್ಪ, ಶ್ರೀಮತಿ ನಿರ್ಮಲಾ ಚಂದ್ರಶೇಖರ್, ಶ್ರೀಮತಿ ಕುಸುಮಾ ಪಾಟೀಲ್, ಶ್ರೀಮತಿ ಅರುಣಾ ಪರಮೇಶ್ವರಪ್ಪ, ಶ್ರೀಮತಿ ಪ್ರೇಮಾನಾಗರಾಜ್ ಇವರೆಲ್ಲರೂ ರಶ್ಮಿಯ ಆಧಾರಸ್ತಂಭಗಳು. ಅದರಲ್ಲೂ ಡಾ.ಪಿ. ನಾಗರಾಜ್ ಮತ್ತು ಶ್ರೀಮತಿ ಪ್ರೇಮಾ ನಾಗರಾಜ್ ಇವರಿಬ್ಬರೂ ತಮ್ಮ ದಿನದ ಬಹುಪಾಲು ಸಮಯವನ್ನು ಈ ಮಕ್ಕಳೊಂದಿಗೇ ಕಳೆಯುತ್ತಿದ್ದಾರೆ.

ಮಾತಾಜಿ ಯೋಗಾನಂದಮಯಿ, ಚಾರ್ಟೆಡ್ ಅಕೌಂಟೆಂಟ್ ಗಿರೀಶ್ ನಾಡಿಗ್, ಶ್ರೀಮತಿ ನಳಿನಿ ಅಚ್ಯುತ್, ಜಯಣ್ಣ, ಶಂಭುಲಿಂಗಪ್ಪ ಇವರಂತಹ ಅನೇಕರು ಭಾವನಾತ್ಮಕ, ನೈತಿಕ, ಅಧ್ಯಾತ್ಮಿಕ ಮತ್ತು ಶೈಕ್ಷಣಿಕವಾಗಿ ಈ ರಶ್ಮಿಗೆ ಬೆಂಬಲವಾಗಿ ನಿಂತಿದ್ದಾರೆ. ಈ ಸತ್ಕಾರ್ಯ ಇನ್ನೂ ಯಶಸ್ವಿಯಾಗಿ ಸಾಗಲಿ ಎಂದು ಹಾರೈಸೋಣ. ಸತ್ಕಾರ್ಯದಲ್ಲಿ ನಿರತರಾದವರನ್ನು ಮನಸಾರೆ ಅಭಿನಂದಿಸೋಣ.

- ಜಗನ್ನಾಥ್ ನಾಡಿಗೇರ್

# ದೊಡ್ಡಬಾತಿ ಹಾಲು ಉತ್ಪಾದಕರ ಸಂಘದ ಚುನಾವಣೆಯಲ್ಲಿ ಬಿಜೆಪಿ ಗುಂಪಿಗೆ ಜಯ



ದಾವಣಗೆರೆ, ಡಿ.24- ದೊಡ್ಡಬಾತಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಗುಂಪಿಗೆ ಭರ್ಜರಿ ಜಯ ಲಭಿಸಿದೆ ಎಂದು ಬಿಜೆಪಿ ಮುಖಂಡ ಡಿ.ಆರ್.ವಿರೇಶ್ ತಿಳಿಸಿದ್ದಾರೆ.

12 ಸ್ಥಾನಗಳ ಪೈಕಿ 11 ಸ್ಥಾನಗಳಿಗೆ ಭಾನುವಾರ ಚುನಾವಣೆ ನಡೆಯಿತು. 12 ಸ್ಥಾನಗಳ ಪೈಕಿ 10 ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದು, ಎಸ್ಟಿ ಕ್ಷೇತ್ರದಿಂದ ಕೃಷ್ಣ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣೆಯಲ್ಲಿ ಎ.ಮುನಿಯಪ್ಪ, ವಸಂತಪ್ಪ, ಪಿ.ವೀರೇಶ್, ಸಿದ್ದಲಿಂಗಪ್ಪ, ಚಂದ್ರಪ್ಪ ಪೂಜಾರ್, ಶ್ರೀಮತಿ ಸರಿತಾ ಮಹೇಶಪ್ಪ, ಶ್ರೀಮತಿ ಶಶಿಕಲಾ ರೇವಣಸಿದ್ದಪ್ಪ, ಉಪ್ಪಾರ್ ಶಿವಕುಮಾರ್, ಹೆಚ್.ಕೆ.ಚಂದ್ರಪ್ಪ, ಎ.ಕೆ. ಗಂಗಾಧರ್, ಶಂಕರ್ ಅವರುಗಳು ಗೆಲುವು ಸಾಧಿಸಿದ್ದಾರೆ. ಚುನಾವಣಾಧಿಕಾರಿ ಜಗದೀಶ್ ಕಾರ್ಯನಿರ್ವಹಿಸಿದರು.

# ಗುದ್ದಾಟದಿಂದ ಹೊರ ಬರಲು ಯಡಿಯೂರಪ್ಪ ಕರೆ

(1ನೇ ಪುಟದಿಂದ) ಮುಂದಿನ ಎಲ್ಲಾ ಕಾರ್ಯಗಳಿಗೂ ಬೆಂಬಲ ನೀಡುವುದಾಗಿ ಹೇಳಿದರು.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಮಾತನಾಡುತ್ತಾ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿ, ಮಹಾ ಅಧಿವೇಶನದಲ್ಲಿ ಕೈಗೊಂಡಿರುವ ಎಲ್ಲಾ ನಿರ್ಣಯಗಳನ್ನು ಸಮಾಜದ ಮಗಳಾಗಿ, ಸಚಿವೆಯಾಗಿ ಬೆಂಬಲಿಸುವುದಾಗಿ ಹೇಳಿದರು.

12ನೇ ಶತಮಾನದಲ್ಲಿಯೇ ವಿಶ್ವಕ್ಕೆ ದಾರಿ ತೋರಿಸಿದ ಬಸವಣ್ಣನವರು ಹುಟ್ಟುಹಾಕಿದ ಸಮಾಜ ನಮ್ಮದು.

ಇಂದು ನಮ್ಮೆಲ್ಲಾ ಒಳ ಪಂಗಡಗಳು ಒಂದಾಗುವ ಕಾಲ ಬಂದಿದೆ. ನಮ್ಮ ಮುಂದಿನ ಪೀಳಿಗೆಯ ಭವಿಷ್ಯಕ್ಕಾಗಿ ಒಂದಾಗಲೇ ಬೇಕಿದೆ. ಆಗ ಮಾತ್ರ ಸಮಾಜಕ್ಕೆ ನ್ಯಾಯ ದೊರಕಿಸಿಕೊಡಲು ಸಾಧ್ಯ ಎಂದು ಹೇಳಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಉಜ್ಜಯಿನಿ ಪೀಠದ ಜಗದ್ಗುರು ಸಿದ್ಧಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಮಾತನಾಡುತ್ತಾ, ಕೈಯಲ್ಲಿರುವ ಐದು ಬೆರಳುಗಳನ್ನು ಒಗ್ಗೂಡಿಸಿ ಹೇಗೆ ಸುಲಭವಾಗಿ ಕೆಲಸ ಮಾಡಬಹುದೋ ಹಾಗೆ, ಎಲ್ಲಾ ಒಳ ಪಂಗಡಗಳು ಒಂದಾದಾಗ ಸಮಾಜಕ್ಕೆ ಬಲ ಬರುತ್ತದೆ ಎಂದು ನುಡಿದರು.

ಬೇರೆ ಬೇರೆ ಮರದ ಕಟ್ಟಿಗೆಯನ್ನು ಸುಟ್ಟಾಗ ಅದು ಹೇಗೆ ಬೂದಿಯಾಗಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತದೋ ಹಾಗೆಯೇ ಲಿಂಗಧಾರಣೆಯಾದಾಗ ಮನುಷ್ಯನೂ ತನ್ನ ಮೂಲ ಸ್ವರೂಪ ಕಳೆದಕೊಂಡು ಕೇವಲ ವೀರಶೈವ ಲಿಂಗಾಯತನಾಗುತ್ತಾನೆ. ಈ ತತ್ವಸಿದ್ಧಾಂತವನ್ನೇ ಮಹಾಸಭಾ ಬಯಸುತ್ತದೆ ಎಂದು ತಿಳಿಸಿದರು.

ವೀರಶೈವ ಮಹಾಸಭಾವೇ ಸಮಾಜದ ಮುಖಂಡರುಗಳ ಮೂಲಕ ತಳ ಮಟ್ಟದಿಂದ ಜಾತಿ ಗಣತಿ ಮಾಡಿ, ಅಂಕಿ ಅಂಶಗಳನ್ನು ಇಟ್ಟುಕೊಳ್ಳಬೇಕು ಎಂದು ಶ್ರೀಗಳು ಸಲಹೆ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿ, ಅಕ್ಕಮಹಾದೇವಿ, ಹೇಮರಡ್ಡಿ ಮಲ್ಲಮ್ಮ ಹಾಗೂ ಕಿತ್ತೂರು ಚನ್ನಮ್ಮ ಜಯಂತಿಯನ್ನು ಪ್ರತ್ಯೇಕ ದಿನಗಳಲ್ಲಿ ಆಚರಿಸದೆ, ಒಂದೇ ದಿನ ಆಚರಿಸುವಂತಾಗಬೇಕು ಎಂದರು.

ಶಿರಹಟ್ಟಿಯ ಶ್ರೀ ಮಹಾರಾಜ ನಿರಂಜನ ಜಗದ್ಗುರು ಪಕೀರ ಸಿದ್ಧರಾಮೇಶ್ವರ ಮಹಾಸ್ವಾಮೀಜಿ, ಪಾಂಡೋಮಟ್ಟಿಯ ಶ್ರೀ ಗುರುಬಸವ ಮಹಾಸ್ವಾಮೀಜಿ, ಕನಕಪುರದ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮೀಜಿ, ಮಹಾಸಭೆಯ ಹಿರಿಯ ಉಪಾಧ್ಯಕ್ಷ ಡಾ.ಎನ್. ತಿಪ್ಪಣ್ಣ, ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ್ ಬಿ. ಖಂಡ್ರೆ, ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್, ಉದ್ಯಮಿ ಅಥಣಿ ವೀರಣ್ಣ, ಬಿ. ಎಸ್. ಉಮಾಪತಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸೌಮ್ಯ ಸತೀಶ್ ಪ್ರಾರ್ಥಿಸಿದರು. ಟಿ.ಬಿಜಿ. ಸುರೇಶ್ ಸ್ವಾಗತಿಸಿದರು. ಕರೇಶಿವಪ್ಪ ಸಿದ್ದೇಶ್ ವಂದಿಸಿದರು.

## ಮಹಾಧಿವೇಶನದಲ್ಲಿ 8 ನಿರ್ಣಯಗಳು

(1ನೇ ಪುಟದಿಂದ) ಜನಗಣತಿ ಆಗಬೇಕು.

ಜನ ಗಣತಿಯ ವೇಳೆ ನಮ್ಮ ಸಮಾಜದ ಬಾಂಧವರು ಹಿಂದು ಮತ್ತು ತಮ್ಮ ಉಪ ಜಾತಿಯ ಹೆಸರುಗಳನ್ನು ಬರೆಸದೆ, ಧರ್ಮದ ಕಾಲಂನಲ್ಲಿ ವೀರಶೈವ ಅಥವಾ ಲಿಂಗಾಯತ ಎಂದೇ ಬರೆಸಬೇಕು.

ರೈತರಿಗೆ ಅನುಕೂಲ ಆಗುವಂತೆ ರಾಜ್ಯದ ಎಲ್ಲ ನೀರಾವರಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಒತ್ತಾಯ.

ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ವಾಸವಿದ್ದ ಚಿತ್ರದುರ್ಗದ ಅವರ ನಿವಾಸವನ್ನು ಸರ್ಕಾರ ಖರೀದಿಸಿ, ಸಂರಕ್ಷಿಸಿ, ಶಾಶ್ವತ ಸ್ಮಾರಕ ನಿರ್ಮಾಣ ಮಾಡಬೇಕು. ದಿ. ನಿಜಲಿಂಗಪ್ಪನವರ ಪುಣ್ಯ ಸ್ಮರಣೆಯ ದಿನವಾದ ಆಗಸ್ಟ್ 8, 2024ರೊಳಗೆ ಸ್ಮಾರಕ ನಿರ್ಮಾಣಕ್ಕೆ ಕ್ರಮವಹಿಸಬೇಕು.

ಮಹಾಸಭಾದ 24ನೇ ಮಹಾಧಿವೇಶ ಯಶಸ್ವಿಯಾಗಿ ನಡೆಯಲು ಕಾರಣ ಕರ್ತರಾದ ಸ್ವಾಮೀಜಿಗಳು, ಮುಖಂಡರು, ಗಣ್ಯರು ಸೇರಿದಂತೆ ಎಲ್ಲರಿಗೂ ಕೃತಜ್ಞತೆ ಸಮರ್ಪಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

# ಸಮಾಜ ಒಂದಾದರೆ ವ್ಯಕ್ತಿಗತ ಬೆಳವಣಿಗೆ : ಪಂಡಿತಾರಾಧ್ಯ ಶ್ರೀಗಳು

(1ನೇ ಪುಟದಿಂದ) ಚೌಕಟ್ಟಿನಿಂದ ಹೊರ ಬಂದು ನಾವು ವಿಶ್ವಮಾನವರಾಗಬೇಕಿದೆ. ಹನ್ನೆರಡನೇ ಶತಮಾನದಲ್ಲಿಯೇ ಧರ್ಮದಲ್ಲಿನ ಕರ್ಮಟ ಹೊಡೆದು ಹಾಕಿ ಸಮ ಸಮಾಜ ನಿರ್ಮಿಸಲು ಪ್ರಯತ್ನಿಸಿದವರು ಬಸವಣ್ಣ. ಅಂತಹ ಗುರುಗಳನ್ನು ಹೊಂದಿಯೂ, ಗುರುಗಳಿಲ್ಲದಂತೆ ವರ್ತಿಸುತ್ತಿದ್ದೇವೆ. ವ್ಯಕ್ತಿಗತವಾಗಿ ಸುಧಾರಣೆಯಾದರೆ ಸಮಾಜವೂ ಸುಧಾರಣೆಯಾಗುತ್ತದೆ ಎಂದು ಹೇಳಿದರು.

ಲಿಂಗಾಯತ ಎಂಬುದು ಜಾತಿಯಲ್ಲ, ಇದೊಂದು ಧರ್ಮ, ತತ್ವ ಸಿದ್ಧಾಂತಕ್ಕೆ ಬದ್ಧರಾಗಿ ಬದುಕಿದವರೆಲ್ಲಾ ಸಮಾಜದ ಬಂಧುಗಳಾಗಬೇಕು ಎಂದು ಶ್ರೀಗಳು, ನಾವೆಲ್ಲಾ ಒಂದಾದರೆ ನಮ್ಮದೇ ವಿಶ್ವಧರ್ಮವಾಗುತ್ತಿತ್ತು ಎಂದು ಹೇಳಿದರು.

ಯುವ ಪೀಳಿಗೆಯ ಆಚಾರ-ವಿಚಾರದ ಶೈಲಿ ಬದಲಾಗಬೇಕು. ಇಷ್ಟಲಿಂಗಧಾರಿಗಳಾಗಬೇಕು. ಆಗ ನೈತಿಕವಾಗಿಯೂ, ಧಾರ್ಮಿಕವಾಗಿಯೂ ಬಲಶಾಲಿಗಳಾಗಿ ಜಗತ್ತಿಗೆ ನಮ್ಮ ವ್ಯಕ್ತಿತ್ವ ತೋರಿಸಲು ಸಾಧ್ಯವಾಗುತ್ತದೆ ಎಂದರು.

ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕರೆಂದು ಸರ್ಕಾರ ಘೋಷಿಸಬೇಕೆಂದು ಮಹಾಸಭಾ ನಿರ್ಣಯಕ್ಕೆ ಸಹ ಮತ ವ್ಯಕ್ತಪಡಿಸಿದ ಶ್ರೀಗಳು, ಆದಷ್ಟು ಶೀಘ್ರ ಸರ್ಕಾರ ಸಚಿವ ಸಂಪುಟದಲ್ಲಿ ಈ ಕುರಿತು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಬೇರೆ ಯೋಜನೆಗಳಿಗೆ ಒಂದಿಷ್ಟು ಕಡಿಮೆ ಹಣ ಮೀಸಲಿಟ್ಟು, ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ನೀಡಿದಲ್ಲಿ ರೈತ ಆರ್ಥಿಕವಾಗಿ ಸದೃಢನಾಗುತ್ತಾನೆ ಎಂದು ಹೇಳಿದರು.


**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಮಹಿಳೆಯರು, ಹುಡುಗರು, ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ
63635 43487

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗೆ ಇದೆ**
ಸುಸಜ್ಜಿತವಾದ 2 BHK ಮನೆ. ವಿದ್ಯಾನಗರ, ನೂತನ ಕಾಲೇಜು ರಸ್ತೆ, ಕಾಮದೇನು ಹೋಟೆಲ್ ಹತ್ತಿರ.
ಮೊ : 97400 01129

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 40x50 South, 40x55 North, 50x45 South, 35x48 South, 30x40 South, 30x28 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಖರೀದಿಗೆ ಬೇಕಾಗಿದೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ
ಕಿರಣ್ ಭೂಸನೂರ್ (ಏಜೆಂಟ್)
98440 63409
(ದಾವಣಗೆರೆಯಲ್ಲಿ ಎಲ್ಲಾದರೂ)

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ, ವಾಜಪೇಯಿ ಬಡಾವಣೆಯ (ಪಕ್ಕ) ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ, ದರ ಒಂದು ಅಡಿಗೆ 3200 ರೂ. ಗಳಲ್ಲಿ ಲಭ್ಯ. 30x40 ಪಶ್ಚಿಮ, 30x40 ದಕ್ಷಿಣ, 30x50 ಪೂರ್ವ, 30x50 ಉತ್ತರ-ಪೂರ್ವ ಕಾರ್ನರ್
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, Rate - 2800/- 40x60 East, 40x60 North, 40x60 South, 30x40 East, 30x50 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಾರುಗಳು ಮಾರಾಟಕ್ಕಿವೆ**
Tata Tiago Diesel 2017
Maruthi Wagon0r 2017
Renault Duster 2018
Hyundai Eon 2015
ದೈವಿಕ್ ಐನಳ್ಳಿ
99456 43223

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**WEAR-HOUSE FOR RENT**
Contact :
98452 46557

**ಜಮೀನು ಮಾರಾಟಕ್ಕಿದೆ**
12 ಎಕರೆ ನೀರಾವರಿ ಸೌಲಭ್ಯವಿರುವ ಸ್ವಂತ ಜಮೀನು ಮಾರಾಟಕ್ಕಿದೆ.
95900 88767
81056 70240

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, B.COM ಆದ ಮಹಿಳೆಯರು ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ ದಾವಣಗೆರೆ.

**ಸೈಟು ಮಾರಾಟಕ್ಕಿದೆ**
ದಾವಣಗೆರೆ ರವೀಂದ್ರನಾಥ ಬಡಾವಣೆಯಲ್ಲಿ 52x60 North-East, Corner site ಮಾರಾಟಕ್ಕಿವೆ, ( Shashi detergent ಬಟ್ಟೆ ಸೋಪ್ ಫ್ಯಾಕ್ಟರಿ ಎದುರುಗಡೆ) ಸಂಪರ್ಕಿಸಿ :
90195 54141, 98454 17444

**SECURITY GUARD ಬೇಕಾಗಿದ್ದಾರೆ**
ಗ್ರಾನೈಟ್ ಶೋ ರೂಂ ಮತ್ತು ಹೋಟೆಲ್
70012 87756 97409 77785

**ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ**
ಕಾವ್ಯಂಜಲಿ, ಚೌಕಿಪೇಟೆ ಜೈನ್ ಟೆಂಪಲ್ ಹತ್ತಿರ, ದಾವಣಗೆರೆ
ಸಂಬಳ 7,000 ರಿಂದ 10,000 + Sales Incentives
98445 52400

**ಮನೆ ಬಾಡಿಗೆಗೆ ಇದೆ**
1BHK, 1st Floor, ವಿನೋಬನಗರ, 3ನೇ ಮೇನ್, 9ನೇ ಕ್ರಾಸ್, ಸಿದ್ಧಿ ವಿನಾಯಕ ಶಾಲೆ ಪಕ್ಕ. ಸಂಪರ್ಕಿಸಿ :
99648 33399
98444 13536

**ಸೈಟುಗಳು ಮಾರಾಟಕ್ಕಿವೆ**
ಶಿವಮೊಗ್ಗ N.H. 206 PESIT ಕಾಲೇಜ್ ಹತ್ತಿರ 25 ಎಕ್ಕರೆ ಜಾಗದಲ್ಲಿ 30x50, 40x60, 50x80, 50x100, 100x100 ಸೈಟುಗಳು ಮಾರಾಟಕ್ಕಿವೆ, 5 ಸ್ಟಾರ್ ಲೆವೆಲ್ ಮಾಡಲಾಗಿದೆ. Rare approved ಆಗಿದೆ. ಸಂಪರ್ಕಿಸಿ :
90195 54141

**HOUSE TO LET**
3 BHK, #2720/18, 1st Floor, Behind Kalleshwara Apartment, 15th Cross, Anjaneya Extension Davanagere.
87928 83134, 94489 48279

**ಅಕ್ಷಯ ಗೋಲ್ಡ್**
ಚಿನ್ನಾಭರಣ ಖರೀದಿ
ಬಂಗಾರ, ಬೆಳ್ಳಿ ಬಗ್ಗೆ ಮಾಹಿತಿ ಬೇಕಾಗಿದ್ದಲ್ಲಿ ಕರೆ ಮಾಡಿ.
87110 04905

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**PART TIME JOBS**
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
87490 98879

**ನಾಯಿ ಮರಿಗಳು ದೊರೆಯುತ್ತವೆ**
ಒಂದು ತಿಂಗಳಿನ SHITZU ತಳಿಯ ನಾಯಿ ಮರಿಗಳು ದೊರೆಯುತ್ತವೆ. ಸಂಪರ್ಕಿಸಿ.
94814 48639

**WANTED COOKS**
South, North Indian cooks. And Chinees.
81475 47421

**ಬೇಕಾಗಿದ್ದಾರೆ**
ದಾವಣಗೆರೆ ನಗರ ಪ್ರದೇಶದಲ್ಲಿ ಟೈಲರಿಂಗ್ ಮತ್ತು ಎಂಬ್ರಾಯಿಡರಿ ಮಹಿಳಾ ತರಬೇತುದಾರರು ಮತ್ತು ಸಮುದಾಯ ಸಂಘಟನೆಯ ಅನುಭವಿ ಪದವೀಧರರು ಸಂಪರ್ಕಿಸಿ.
88676 95774

**2 BHK HOUSE FOR RENT**
2 BHK House for Rent. 14th Cross Anjaneya Badavane, Near by Sanjeevani Nursing College/Opposite to Nutan College. East facing, Bore and Tap water Available. Contact
94490 23364, 90192 22404

**ವಾಣಿಜ್ಯ ಮಳಿಗೆ ಬಾಡಿಗೆಗೆ**
ದಾವಣಗೆರೆ ರಾಂ ಅಂಡ್ ಕೋ ಸರ್ಕಲ್ ಹತ್ತಿರ, ಮೊದಲನೇ ಮಹಡಿಯಲ್ಲಿ ಅಟ್ಯಾಚ್ ಬಾತ್‌ರೂಮುಳ್ಳ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. ಸಂಪರ್ಕಿಸಿ.
97431 50555

**ತಕ್ಷಣ ಬೇಕಾಗಿದ್ದಾರೆ**
ಸೌತ್ ಇಂಡಿಯನ್ ಅಡುಗೆ ಭಟ್ಟರು (ಕುಕ್) ಸಪ್ಲೈಯರ್ ಅನುಭವ ಇರುವವರಿಗೆ ಆಕರ್ಷಕ ವೇತನ ಕೊಡಲಾಗುವುದು.
88846 30532, 96060 96697
81055 47878

**CHANGE OF NAME**
I, Manjula Myageri (Old Name) W/o Girish K.H. R/o # 2149/3, ,12th Main, Near Chowdeshwari Temple, Bhagath Singh Nagara, Davanagere-577002, Karnataka. I have changed my name as Manjula Girish (New Name) Vide affidavit dt 23-12-2023, sworn before B.Lingaraj, Notary Davanagere. In future all my dealings & transactions will be in my new name. - Sd/- Manjula Girish

**WANTED**
• SALESMAN
• SALESGIRLS
• HELPERS
CONTACT: GANGAVATHI SILK SAREE CENTER
BINNY COMPANY ROAD, DAVANGERE - 577001

**ಮನೇ ಲೀಸ್‌ಗೆ ಇದೆ**
1ನೇ ಮಹಡಿ, 2BHK, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ. 20x45 ಪಶ್ಚಿಮ ಬಾಗಿಲು. (ಸಸ್ಯಹಾರಿಗಳಿಗೆ ಮಾತ್ರ)
ವಿಳಾಸ : 1ನೇ ಮೇನ್, 5ನೇ ಕ್ರಾಸ್, ಬಿ ಬ್ಲಾಕ್ ಸರಸ್ವತಿ ನಗರ, ದಾವಣಗೆರೆ.
ಮೊ : 76191 15208

**ಮನೆ ಮಾರಾಟಕ್ಕಿದೆ**
20x30 ಸೈಜಿನ (2BHK) ಹೊಸ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
ಸ್ಥಳ : ಆರ್‌ಟಿಓ ಆಫೀಸ್ ಎದುರು, BSNL ಆಫೀಸ್ ಹಿಂಭಾಗ, ಪಿ.ಬಿ. ರೋಡ್, ದಾವಣಗೆರ.
80957 77898

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 18 ಕಿ.ಮೀ. ದೂರದಲ್ಲಿರುವ 2.5 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. ಸಂಪರ್ಕಿಸಿ :
94483 38709
74830 48533

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**SMART CITY CABS DAVANAGERE**
Minimum 4km Rs - 99/- Above per km Rs - 25/- Waiting charges per hour Rs - 100/- and 24 Service will be available.
Ph : 08192 255555
94811 79933, 9986818205

# ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರಗೆ ಅದ್ಧೂರಿ ಸ್ವಾಗತ



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭಾನುವಾರ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಅಭಿಮಾನಿ ಬಳಗದಿಂದ ಕಾರ್ ರ್‍ಯಾಲಿ ಮೂಲಕ ಸ್ವಾಗತಿಸಿ, ಶಾಮನೂರು ರಸ್ತೆಯಲ್ಲಿ ಸನ್ಮಾನಿಸಲಾಯಿತು.

ದಾವಣಗೆರೆ, ಡಿ.24- ಬಿಜೆಪಿ ರಾಜ್ಯಾಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ಇಂದು ನಗರಕ್ಕೆ ಆಗಮಿಸಿದ ಬಿ. ವೈ.ವಿಜಯೇಂದ್ರ ಅವರಿಗೆ ಬಿಜೆಪಿ ಕಾರ್ಯಕರ್ತರು ಜೈಕಾರಗಳನ್ನು ಹಾಕಿ, ಹೂವಿನ ಸುರಿಮಳೆ ಸುರಿಸಿ, ಅದ್ಧೂರಿ ಸ್ವಾಗತ ಕೋರಿದರು.

ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಬಳಿ ಬೃಹದಾಕಾರದ ಹೂವಿನ ಹಾರ ಹಾಕಿ, ಪಟಾಕಿ ಸಿಡಿಸಿ ವಿಜಯೇಂದ್ರ ಅವರನ್ನು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಸೇರಿದಂತೆ ಪಕ್ಷದ ಮುಖಂಡರು ಬರಮಾಡಿಕೊಂಡರು.

ಬಾಪೂಜಿ ಎಂಬಿಎ ಕಾಲೇಜಿನ ಮೈದಾನದಲ್ಲಿ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಮಹಾಧಿವೇಶನಕ್ಕೆ ಆಗಮಿಸಿದ ವಿಜಯೇಂದ್ರ ಅವರಿಗೆ ಜೈಕಾರಗಳು ಮೊಳಗಿದವು.

ಅಪೂರ್ವ ರೆಸಾರ್ಟ್ ಬಳಿ ಆರಂಭಗೊಂಡ ಕಾರ್ ರ್‍ಯಾಲಿಯು ರಾಜ ಬೀದಿಗಳ ಮುಖಾಂತರ ಮಹಾ ಅಧಿವೇಶನದ ಬಳಿ ಸಮಾರೋಪಗೊಂಡಿತು.

ವಿಜಯೇಂದ್ರ ಮಾತನಾಡಿ, ನಿಮ್ಮ ಪ್ರೀತಿ, ವಿಶ್ವಾಸಕ್ಕೆ ಎಂದೆಂದಿಗೂ ಚಿರಋಣಿ ಎಂದು ಹೇಳಿದರು.

ಮುಂಬರುವ ದಿನಗಳಲ್ಲಿ ಮತ್ತೆ ದಾವಣಗೆರೆಗೆ ಬರುತ್ತೇನೆ. ದೊಡ್ಡ ಸಮಾವೇಶ ಮಾಡೋಣ. ಲಕ್ಷಾಂತರ ಜನರನ್ನು ಸೇರಿಸೋಣ. ಕಾಂಗ್ರೆಸ್ ಅಧಿಕಾರದಿಂದ ಜನರು ಬೇಸತ್ತಿದ್ದಾರೆ. ದುರಂಹಕಾರ ಮಿತಿಮೀರಿದೆ. ಇದಕ್ಕೆ ಕಡಿವಾಣ ಹಾಕಬೇಕಿದೆ. ಪಕ್ಷದ ಕಾರ್ಯಕರ್ತರು ಯೋಧರಂತೆ ಕಾರ್ಯನಿರ್ವಹಿಸೋಣ. ನಾವು ಮನೆಯಲ್ಲಿ ಕುಳಿತುಕೊಳ್ಳದೇ, ಲೋಕಸಭೆ ಚುನಾವಣೆಯಲ್ಲಿ 28 ಸ್ಥಾನಗಳನ್ನು ಗೆಲ್ಲುವವರೆಗೂ ವಿರಮಿಸುವುದು ಬೇಡ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

## ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಹೊಸ್ತಿಲ ಹುಣ್ಣಿಮೆ ವಿಶೇಷ ಪೂಜೆ



ದಾವಣಗೆರೆ, ಡಿ.24- ನಗರದ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಹೊಸ್ತಿಲ ಹುಣ್ಣಿಮೆ ಪ್ರಯುಕ್ತ ನಾಳೆ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ರಾಜ್ಯೋತ್ಸವ

ದಾವಣಗೆರೆ, ಡಿ.24- ಕನ್ನಡ ಪರ ಸಂಘಟನೆಗಳ ಒಕ್ಕೂಟದ ಮಹಿಳಾ ಘಟಕದಿಂದ ಇಂದು ಸಂಜೆ 5 ಗಂಟೆಗೆ ಶ್ರೀ ಶಿವಯೋಗಾಶ್ರಮದ ಆವರಣದಲ್ಲಿ 68ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಮಹಿಳಾ ಘಟಕದ ಅಧ್ಯಕ್ಷತೆ ಶುಭಮಂಗಳ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ಲತಾ ಮಲ್ಲಿಕಾರ್ಜುನ್, ಶಿಕ್ಷಣ ಕ್ಷೇತ್ರದ ಸಾಧಕಿ ಶೃತಿ ಇನಾಂದಾರ್ ಆಗಮಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ, ಎಸ್ಪಿ ಉಮಾ ಪ್ರಶಾಂತ್, ಆಯುಕ್ತೆ ರೇಣುಕಾ, ಎಸಿ ದುರ್ಗಾಶ್ರೀ, ಡಾ. ಶುಕ್ಲ ಶೆಟ್ಟಿ, ಇಂದ್ರಮ್ಮ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ನಂತರ ಭಾರತಿ ವಾದ್ಯ ವೃಂದದವರಿಂದ ಸಂಗೀತ ಸಂಜೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪತ್ರಿಕಾಗೋಷ್ಠಿಯಲ್ಲಿ ದ್ರಾಕ್ಷಾಯಿಣಮ್ಮ ಕಾವ್ಯ, ರಾಜೇಶ್ವರಿ, ಸಂಗಮ್ಮ, ಗೀತಾ ಚಂದ್ರಶೇಖರ್, ಸುವರ್ಣಮ್ಮ, ಪಾರ್ವತಿ, ಸುನೀತ ಉಪಸ್ಥಿತರಿದ್ದರು.



ಕಾರ್ತೀಕ... ದಾವಣಗೆರೆ ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಭಾನುವಾರ ಕಡೇ ಕಾರ್ತಿಕೋತ್ಸವ ಸಂಭ್ರಮದಿಂದ ನೆರವೇರಿತು.



# ಒಂದಾಗಿ ಒ.ಬಿ.ಸಿ. ಬೇಡಿಕೆ ಮುಂದಿಡಬೇಕಿದೆ

**ಕಾಶಿ ಜಗದ್ಗುರು ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ**

ದಾವಣಗೆರೆ, ಡಿ. 24 – ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಒಳಪಂಗಡಗಳು ಹಾಗೂ ಒಳಪಂಗಡಗಳ ಸ್ವಾಮೀಜಿಗಳು ಸೇರಿಕೊಂಡು ಒಂದಾಗಿ ಕೇಂದ್ರ ಸರ್ಕಾರದ ಒ.ಬಿ.ಸಿ. ಮೀಸಲಾತಿಗೆ ಬೇಡಿಕೆ ಮುಂದಿಡಬೇಕಿದೆ. ಇದರಿಂದ ಸಮಾಜದ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ಕಾಶಿ ಜಗದ್ಗುರು ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾದ ವತಿಯಿಂದ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ 24ನೇ ಮಹಾ ಅಧಿವೇಶನದ ಧಾರ್ಮಿಕ ಅಧಿವೇಶನದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪಂಚಪೀಠದ ಜಗದ್ಗುರುಗಳು ಎಲ್ಲಾ ವರ್ಗಗಳ ಸಮಾಜದ ಮುಖಂಡರ ಜೊತೆಗೂಡಿ ಕೇಂದ್ರದಿಂದ ಒ.ಬಿ.ಸಿ. ಮೀಸಲಾತಿ ಪಡೆಯುವ ಕುರಿತು ಚರ್ಚಿಸಿದ್ದೇವೆ. ವೀರಶೈವ ಲಿಂಗಾಯತ ಮಹಾಸಭಾ ಸಹ ಇದೇ ವಿಷಯವನ್ನು ಮುಂಚೂಣಿಗೆ ತರುತ್ತಿದೆ ಎಂದವರು ಹೇಳಿದರು.

ಜಾತಿಗಳನ್ನು ಬಿಡುವಂತೆ ಬಸವಣ್ಣನವರು ಸಾವಿರ ವರ್ಷಗಳ ಹಿಂದೆಯೇ ಹೇಳಿದ್ದರು. ಆದರೆ, ವೀರಶೈವ ಲಿಂಗಾಯತರು ವೃತ್ತಿ ಆಧರಿತ ಒಳಪಂಗಡಗಳನ್ನೇ ಜಾತಿಗಳಾಗಿ ಮುಂದುವರೆಸಿಕೊಂಡು ಬಂದರು. ಈಗ ಕೆಟ್ಟ ಮೇಲೆ ಬುದ್ಧಿ ಬಂತು ಎಂಬ ಪರಿಸ್ಥಿತಿ ಆಗಿದೆ. ಒಳಪಂಗಡ ಕೈ ಬಿಡದ ಹೊರತು ಸಮಾಜ ಬಲಿಷ್ಠವಾಗುವುದಿಲ್ಲ ಎಂದು ಶ್ರೀಗಳು ಹೇಳಿದರು.

ದೇಶಾದ್ಯಂತ ವೀರಶೈವ ಲಿಂಗಾಯತ ಸಮುದಾಯದವರಿದ್ದಾರೆ. ಆ ಎಲ್ಲರನ್ನೂ ಒಗ್ಗೂಡಿಸಲು ಮಹಾಸಭಾ ಕ್ರಮ ತೆಗೆದುಕೊಳ್ಳಬೇಕಿದೆ. ಕರ್ನಾಟಕದ ಹೊರಗಿನ ಸಮುದಾಯಗಳ ಪ್ರತಿನಿಧಿಗಳನ್ನು ಆಹ್ವಾನಿಸಬೇಕಿದೆ ಎಂದು ಸ್ವಾಮೀಜಿ ತಿಳಿಸಿದರು.

ಧಾರ್ಮಿಕ ಅಧಿವೇಶನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಿವಮೊಗ್ಗದ ಆನಂದಪುರಂನ ಮುರುಘರಾಜೇಂದ್ರ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಮಾತನಾಡಿ, ಮಠ ಪರಂಪರೆಗಳು ಮಠಗಳಿಗೆ ಸೀಮಿತವಾಗಬೇಕು. ಹೊರಗಡೆ ಬಂದಾಗ ಸ್ವಾಮೀಜಿಗಳೆಲ್ಲರೂ ಒಂದಾಗಬೇಕು ಎಂದು ಹೇಳಿದರು.

ಲಿಂಗಾಯತ ನಿಂತಿರುವುದೇ ಮಠಗಳ ಮೇಲೆ. ಹೀಗಾಗಿ ಸಮಾಜ ಬೆಳೆಯಬೇಕಾದರೆ ಮಠಗಳು ಬೆಳೆಯಬೇಕಿದೆ. ಮಠಾಧೀಶರಿಗೆ ಒಳ್ಳೆಯ ಶಿಕ್ಷಣ ನೀಡಬೇಕು ಎಂದು ತಿಳಿಸಿದರು.

ಹೊಸಪೇಟೆಯ ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಸ್ವಾಮೀಜಿ ಮಾತನಾಡಿ, ಮಠಗಳ ಶಾಲೆಗಳಲ್ಲಿ ಅಧ್ಯಯನ ಮಾಡುವ ಬಹುತೇಕರು ಲಿಂಗಾಯತೇತರರೇ ಆಗಿದ್ದಾರೆ. ಲಿಂಗಾಯತ ಸಮಾಜ ಬೆಳೆದಷ್ಟೂ ಇಡೀ ಸಮಾಜ ಬೆಳೆಯಲು ಸಾಧ್ಯ ಎಂಬುದನ್ನು ಇದು ತೋರಿಸುತ್ತದೆ ಎಂದರು.

ಕೊಟ್ಟೂರು ಸಂಸ್ಥಾನ ಮಠದ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಶಿವಯೋಗಿಗಳು ಮಾತನಾಡಿ, ಲಿಂಗಾಯತ ಹಾಗೂ ವೀರಶೈವ ಎರಡೂ ಒಂದೇ ಆಗಿದೆ. ಅಂಗದ ಮೇಲೆ ಲಿಂಗ ಧರಿಸುವವನು ಲಿಂಗಾಯತ. ಅಷ್ಟಾವರಣ, ಷಟ್‌ಸ್ಥಳ, ಪಂಚಾಚಾರಗಳನ್ನು ಪಾಲಿಸುವವನೇ ವೀರಶೈವ ಎಂದು ವಿಶ್ಲೇಷಿಸಿದರು.

ಹಾವೇರಿಯ ಹುಕ್ಕೇರಿಮಠದ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣ ಕೇವಲ ಶ್ರೀಮಂತರು ಹಾಗೂ ಮೇಲ್ಜಾತಿಯವರಿಗೆ ಸೀಮಿತವಾಗಿತ್ತು. ಆ ಸಂದರ್ಭದಲ್ಲಿ ಹಾನಗಲ್ ಕುಮಾರೇಶ್ವರು ಶಿಕ್ಷಣ ಹಾಗೂ ಸಂಸ್ಕಾರವನ್ನು ನೀಡಲು ವೀರಶೈವ ಮಹಾಸಭಾ ಸ್ಥಾಪಿಸಿದರು. ಶರಣ ಸಂಸ್ಕೃತಿಯ ಉಳಿವಿಗೆ ಶ್ರಮಿಸಿದರು ಎಂದರು.

ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಧಾರ್ಮಿಕ ಅಧಿವೇಶನ ಉದ್ಘಾಟಿಸಿದರು.

ಕಾರ್ಯಕ್ರಮದ ವೇದಿಕೆಯ ಮೇಲೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಬಾಳೆಹೊಸೂರಿನ ಜಗದ್ಗುರು ಶ್ರೀ ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಚಿಕ್ಕಮಗಳೂರಿನ ಬಸವ ತತ್ವಪೀಠದ ಶ್ರೀ ಬಸವ ಮರುಳಸಿದ್ದಸ್ವಾಮೀಜಿ, ವಿಭೂತಿಪುರ ಸಂಸ್ಥಾನ ಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಶಿವಗಂಗಾದ ಶ್ರೀ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಬೀದರ್‌ನ ಶ್ರೀ ರಾಜಶೇಖರ ಗೋರ್ಟಾ ಸ್ವಾಮೀಜಿ, ಮುಖಂಡರಾದ ಅಲ್ಲಂ ವೀರಭದ್ರಪ್ಪ, ಆಂತರಿಕ ಭದ್ರತಾ ವಿಭಾಗದ ಅಧಿಕಾರಿ ಯತೀಶ್ಚಂದ್ರ ಮತ್ತಿತರರು ಉಪಸ್ಥಿತರಿದ್ದರು.

## ಮಠಮುಖಿ ಸ್ವಾಮೀಜಿ, ಪಕ್ಷಮುಖಿ ರಾಜಕಾರಣಿ

ದಾವಣಗೆರೆ, ಡಿ. 24 - ವೀರಶೈವ ಲಿಂಗಾಯತ ಸಮಾಜವನ್ನು ಸ್ವಾಮೀಜಿಗಳು ಹಾಗೂ ರಾಜಕಾರಣಿಗಳು ಬೆಳೆಸಬೇಕಿತ್ತು. ಆದರೆ, ಸ್ವಾಮೀಜಿಗಳು ಮಠಮುಖಿಗಳಾಗಿದ್ದರೆ, ರಾಜಕಾರಣಿಗಳು ಪಕ್ಷಮುಖಿಯಾಗಿದ್ದಾರೆ. ಇದರಿಂದ ಸಂಘಟನೆಗೆ ಹಿನ್ನಡೆಯಾಗಿದೆ ಎಂದು ಬಾಳೆಹೊಸೂರಿನ ಜಗದ್ಗುರು ಫಕೀರ ದಿಂಗಾಲೇಶ್ವರ ಸ್ವಾಮೀಜಿ ವಿಷಾದಿಸಿದರು.

ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾದ ವತಿಯಿಂದ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ 24ನೇ ಮಹಾಅಧಿವೇಶನದ ಧಾರ್ಮಿಕ ಅಧಿವೇಶನದಲ್ಲಿ ಅವರು ದಿಕ್ಸೂಚಿ ಉಪನ್ಯಾಸ ನೀಡಿದರು.

ಹಾನಗಲ್ ಕುಮಾರೇಶ್ವರರು ಮಠವನ್ನು ತೊರೆದು ಸಮಾಜಮುಖಿಯಾಗಿ ಕೆಲಸ ಮಾಡಿದರು. ಆದರೆ, ಈಗಿನ ಹಲವಾರು ಮಠಾಧೀಶರು ಸಮಾಜದ ಬದಲು ತಮ್ಮ ಮಠಗಳನ್ನೇ ಬೆಳೆಸಲು ಆದ್ಯತೆ ನೀಡುತ್ತಿದ್ದಾರೆ ಎಂದು ವಿಷಾದಿಸಿದರು.

ರಾಜಕಾರಣಿಗಳೂ ಸಹ ಸಮಾಜಕ್ಕಿಂತ ಪಕ್ಷಕ್ಕೇ ಆದ್ಯತೆ ನೀಡುತ್ತಿದ್ದಾರೆ.

ಪಕ್ಷದ ಮೇಲಿನ ಅಭಿಮಾನದಲ್ಲಿ ಶೇ.50ರಷ್ಟು ಅಭಿಮಾನ ಸಮಾಜದ ಮೇಲೆ ಇದ್ದಿದ್ದರೆ, ಇಲ್ಲಿ ಸೇರುತ್ತಿರುವ ಜನರ ಸಂಖ್ಯೆ ಸಾಕಷ್ಟು ಹೆಚ್ಚಾಗಿರುತ್ತಿತ್ತು ಎಂದರು.

## ಹಾವನೂರು ವರದಿಯಿಂದ ಗದಾಪ್ರಹಾರ

**ಜಾತಿ ಗಣತಿಯಿಂದ ಎರಡನೇ ಪೆಟ್ಟು**

ದಾವಣಗೆರೆ, ಡಿ. 24 - ಹಾವನೂರು ವರದಿಯಿಂದ ವೀರಶೈವ ಲಿಂಗಾಯತ ಸಮಾಜದ ಮೇಲೆ ಗದಾ ಪ್ರಹಾರವಾಗಿದೆ. ಈಗ ಜಾತಿ ಗಣತಿಯಿಂದ ಎರಡನೇ ಪೆಟ್ಟು ಬೀಳುತ್ತಿದೆ ಎಂದು ಚಿಕ್ಕಮಗಳೂರಿನ ಬಸವ ತತ್ವಪೀಠದ ಶ್ರೀ ಬಸವ ಮರುಳಸಿದ್ದ ಸ್ವಾಮೀಜಿ ಹೇಳಿದರು.

ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾದ ವತಿಯಿಂದ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ 24ನೇ ಮಹಾ ಅಧಿವೇಶನದ ಧಾರ್ಮಿಕ ಅಧಿವೇಶನದಲ್ಲಿ ಅವರು ಉಪನ್ಯಾಸ ನೀಡಿದರು.

ಹಾವನೂರು ವರದಿಯಿಂದಾಗಿ ಬಹಳಷ್ಟು ದಲಿತ ಸಮುದಾಯಗಳು ವೀರಶೈವ ಲಿಂಗಾಯತ ಬಿಟ್ಟು ಹೋಗಿವೆ. ಇದರಿಂದಾಗಿ ಸಮಾಜ ರಾಜಕೀಯವಾಗಿ ದುರ್ಬಲವಾಯಿತು ಎಂದರು.

ಈಗ ಜಾತಿ ಗಣತಿಯಿಂದ ಎರಡನೇ ಪೆಟ್ಟು ಬೀಳುತ್ತಿದೆ. ಜಾತಿ ಗಣತಿ ವೈಜ್ಞಾನಿಕವಾಗಿ ಮಾಡುವಂತೆ ಸರ್ಕಾರಕ್ಕೆ ಒತ್ತಾಯಿಸಬೇಕಿದೆ. ಸಮಾಜದ ನಿಜ ಸಂಖ್ಯೆ ತೋರಿಸುವ ರೀತಿಯಲ್ಲಿ ಗಣತಿ ಆಗಬೇಕು ಎಂದು ಹೇಳಿದರು.

ವೀರಶೈವ ಲಿಂಗಾಯತ ಸಮುದಾಯದ ಒಳಪಂಗಡಗಳಲ್ಲಿ ಒಬ್ಬೊಬ್ಬರು ಒಂದೊಂದು ಮೀಸಲಾತಿಗೆ ಹೋರಾಟ ನಡೆಸುತ್ತಿದ್ದಾರೆ. ಇದರಿಂದ ಸಮಾಜದ ಶಕ್ತಿ ಕುಂದುತ್ತಿದೆ. ಭಿನ್ನ ದನಿ ಎತ್ತಿದರೆ ಸರ್ಕಾರದ ಮಟ್ಟದಲ್ಲಿ ಸೌಲಭ್ಯ ಪಡೆಯಲು ವಿಫಲರಾಗುತ್ತೇವೆ ಎಂದು ಶ್ರೀಗಳು ಎಚ್ಚರಿಸಿದರು.

ಹಿಂದೂ ಪರಂಪರೆಯಲ್ಲಿ ಜಾತಿಗಳಿವೆ. ವೀರಶೈವ ಲಿಂಗಾಯತರಲ್ಲಿ ಜಾತಿಗಳಿಲ್ಲ, ಒಳಪಂಗಡಗಳಿವೆ. ಮಡಿವಾಳರು ಹಿಂದೂಗಳಲ್ಲಿದ್ದಾಗ ಜಾತಿಯಾಗುತ್ತಾರೆ, ವೀರಶೈವ ಲಿಂಗಾಯತಕ್ಕೆ ಬಂದಾಗ ಒಳಪಂಗಡವಾಗುತ್ತಾರೆ. ಇದೇ ಪರಿಸ್ಥಿತಿ ಕುಂಬಾರ, ಮಾದಾರ ಮುಂತಾದವರದ್ದಾಗಿದೆ ಎಂದವರು ವಿಶ್ಲೇಷಿಸಿದರು.

ಈ ಒಳಪಂಗಡಗಳವರಿಗೆ ಹಿಂದೂಗಳಲ್ಲಿ ಸಿಗುವ ಮೀಸಲಾತಿಯೇ ಅನ್ವಯವಾಗಬೇಕು ಎಂಬ ಹೋರಾಟ ನಡೆಸಬೇಕಿದೆ ಎಂದವರು ತಿಳಿಸಿದರು.

ವೀರಶೈವ ಲಿಂಗಾಯದ ಸಮುದಾಯದವರು ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಳಗಳನ್ನು ಪಾಲಿಸಬೇಕಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ನಮ್ಮದಲ್ಲದ ಹೋಮ, ಹವನ ಹಾಗೂ ಯಜ್ಞಗಳು ಸೇರಿಕೊಂಡಿವೆ. ಇದರಿಂದ ಧರ್ಮ ನಾಶ ಆಗುತ್ತಿದೆ. ಮಠ, ಮನೆ ಹಾಗೂ ಮನಗಳಿಂದ ನಮ್ಮದಲ್ಲದ ಹೋಮ - ಹವನಾದಿಗಳನ್ನು ಹೊರ ಹಾಕಬೇಕಿದೆ ಎಂದೂ ಶ್ರೀಗಳು ಕರೆ ನೀಡಿದರು.

## ವಿಜಯನಗರ ಸಾಮ್ರಾಜ್ಯ ಭವ್ಯತೆಗೆ ತಂದಿದ್ದು ಲಿಂಗಾಯತರು

ದಾವಣಗೆರೆ, ಡಿ. 24 - ವೀರಶೈವ ಲಿಂಗಾಯತ ಸಮುದಾಯದ ಪ್ರೌಢದೇವರಾಯರ ಆಡಳಿತದಲ್ಲಿ ವಿಜಯನಗರ ಸಾಮ್ರಾಜ್ಯ ವಿಸ್ತರಣೆಗೊಂಡು ಶ್ರೀಲಂಕಾವರೆಗೂ ತಲುಪಿತ್ತು. ಅಂತಹ ರಾಜರು ನಮ್ಮ ಸಮುದಾಯಕ್ಕೆ ಸೇರಿದವರು ಎಂಬುದನ್ನು ಮರೆತಿದ್ದೇವೆ ಎಂದು ಬಾಳೆಹೊಸೂರಿನ ಜಗದ್ಗುರು ಶ್ರೀ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾದ ವತಿಯಿಂದ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ 24ನೇ ಮಹಾ ಅಧಿವೇಶನದ ಧಾರ್ಮಿಕ ಅಧಿವೇಶನದಲ್ಲಿ ಅವರು ದಿಕ್ಸೂಚಿ ಉಪನ್ಯಾಸ ನೀಡಿದರು.

ಕೆಳದಿ ಚೆನ್ನಮ್ಮ ಅವರು 63 ಮಠಗಳನ್ನು ಸ್ಥಾಪಿಸಿ, ಈ ಮಠಗಳಿಗೆ 63 ಸಾವಿರ ಎಕರೆ ಜಮೀನು ನೀಡಿದರು ಎಂದು ಹೇಳಿದರು.


ಈ ಬಗ್ಗೆ ಪ್ರಸ್ತಾಪಿಸಿ ಮಾತನಾಡಿದ ಚಿಕ್ಕಮಗಳೂರಿನ ಬಸವ ತತ್ವಪೀಠದ ಶ್ರೀ ಬಸವ ಮರುಳಸಿದ್ದ ಸ್ವಾಮೀಜಿ, ವಿಜಯನಗರ ಸಾಮ್ರಾಜ್ಯವನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಿಸಿ ಪ್ರಬಲಗೊಳಿಸಿದ್ದು ಇಮ್ಮಡಿ ಪ್ರೌಢದೇವರಾಯ. ಅವರು ನಮ್ಮ ಸಮಾಜದವರು ಎಂಬ ಹೆಮ್ಮೆ ಇರಬೇಕು ಎಂದರು.

ಆದರೆ, ವಿಜಯನಗರ ಸಾಮ್ರಾಜ್ಯದ ಉತ್ಥಾನಕ್ಕೆ ಕಾರಣರಾದವರನ್ನು ಮರೆತಿದ್ದೇವೆ. ಪತನಕ್ಕೆ ಕಾರಣರಾದವರನ್ನು ಮೆರೆಸುತ್ತಿದ್ದೇವೆ. ಈ ರೀತಿಯ ಮರೆವು ನಮ್ಮ ಪರಂಪರೆಯ ಮರೆವಿಗೆ ಕಾರಣವಾಗುತ್ತದೆ ಎಂದು ಎಚ್ಚರಿಸಿದರು.

ಹೊಸಪೇಟೆಯ ಕೊಟ್ಟೂರು ಸ್ವಾಮಿ ಸಂಸ್ಥಾನಮಠದ ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಸ್ವಾಮೀಜಿ ಮಾತನಾಡಿ, ಬೆಂಗಳೂರಿನ ನಿರ್ಮಾತೃ ಕೆಂಪೇಗೌಡ ಎಂಬ ಹೆಸರು ಎಲ್ಲೆಡೆ ಕೇಳಿ ಬರುತ್ತದೆ. ಆದರೆ, ಬಳ್ಳಾರಿ ನಿರ್ಮಿಸಿದ ಹಂಡೆ ಹನುಮಪ್ಪ ನಾಯಕರ ಹೆಸರು ಎಲ್ಲೂ ಕೇಳಿ ಬರುವುದಿಲ್ಲ. ವೀರಶೈವ ಲಿಂಗಾಯತ ಸಮುದಾಯದವರು ನಾಡಿನಲ್ಲಿ ನೂರಾರು ನಗರಗಳನ್ನು ನಿರ್ಮಿಸಿದ್ದೇವೆ. ಅವರ ಹೆಸರುಗಳನ್ನು ಹೇಳುತ್ತಿಲ್ಲ ಎಂದು ವಿಷಾದಿಸಿದರು.

# ತಂತ್ರಜ್ಞಾನ, ಆಧುನಿಕ ಕೃಷಿ ಪದ್ಧತಿಯಿಂದ ಲಾಭ

### ಕೃಷಿ ಮತ್ತು ಕೈಗಾರಿಕಾ ಗೋಷ್ಠಿ ಉದ್ಘಾಟಿಸಿ ಮಾತನಾಡಿದ ಕೇಂದ್ರ ಸಚಿವ ಭಗವಂತ ಖೂಬಾ



ದಾವಣಗೆರೆ, ಡಿ. 23- ಆಧುನಿಕ ಕೃಷಿ ಪದ್ಧತಿ ಮೈಗೂಡಿಸಿಕೊಂಡು ತಂತ್ರಜ್ಞಾನದ ಜತೆಗೆ ಯಂತ್ರಗಳನ್ನು ಬಳಸಿ ಕೃಷಿ ಮಾಡುವುದರ ಜತೆಗೆ ತಾವು ಬೆಳೆಯುವ ಉತ್ಪನ್ನಕ್ಕೆ ಮೌಲ್ಯವರ್ಧನೆ ಮಾಡಿ, ಮಾರುಕಟ್ಟೆ ಕಂಡುಕೊಂಡಾಗ ಮಾತ್ರ ಕೃಷಿ ಲಾಭದಾಯಕವಾಗಿ ಹೊರಹೊಮ್ಮಲಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದರು.

ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಆವರಣದಲ್ಲಿ ನಡೆಯುತ್ತಿರುವ ಅಖಿಲ ಭಾರತ ವೀರಶೈವ ಮಹಾಸಭಾದ 24ನೇ ಮಹಾ ಅಧಿವೇಶನದಲ್ಲಿ ಕೃಷಿ ಮತ್ತು ಕೈಗಾರಿಕಾ ಅಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಲಾಭದಾಯಕವಲ್ಲ ಎಂಬ ಕಾರಣಕ್ಕೆ ಈಗಿನ ಯುವಕರು ನಗರಗಳತ್ತ ವಲಸೆ ಹೋಗುತ್ತಿರುವುದು ವಿಪರ್ಯಾಸ. ಹಿಂದಿನ ಕೃಷಿ ಪದ್ಧತಿಯನ್ನು ಈಗಲೂ ಅನುಸರಿಸಿದರೆ ಯಾವುದೇ ಕಾರಣಕ್ಕೂ ಲಾಭವಾಗುವುದಿಲ್ಲ ಎಂದು ಹೇಳಿದರು.

ವೀರಶೈವ ಲಿಂಗಾಯತರು ಬಹುತೇಕರು ಕೃಷಿಕರಾಗಿದ್ದು, ರೈತರ ಹೊಲಗಳಿಗೆ ನೀರು ಹಾಗೂ ದಿನ ಪೂರ್ತಿ ಗುಣಮಟ್ಟದ ವಿದ್ಯುತ್ ಪೂರೈಸುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಮಹಾಸಭಾದ ಅವೇಶನದಲ್ಲಿ ಕೈಗೊಳ್ಳುವಂತೆ ನಿರ್ಣಯ ಕೈಗೊಳ್ಳಬೇಕು ಎಂದು ಇದೇ ವೇಳೆ ಭಗವಂತ ಖೂಬಾ ಸಲಹೆ ನೀಡಿದರು.

ರೈತರಿಗೆ ನೀರು ಮತ್ತು ಗುಣಮಟ್ಟದ ವಿದ್ಯುತ್ ಪೂರೈಕೆಯಾದರೆ ಯಾವುದೇ ಕಾರಣಕ್ಕೂನ ರೈತ ಹಿಂದೆ ಬಿಳಲಾರ ಕಷ್ಟಪಟ್ಟು ಉಳುಮೆ ಮಾಡುತ್ತಾನೆ. ಈ ನಿಟ್ಟಿನಲ್ಲಿ ಈ ಅವೇಶನದಲ್ಲಿ ನಿರ್ಣಯ ಮಾಡಿ ರಾಜ್ಯ ಸರಕಾರದ ಮೇಲೆ ಒತ್ತಡ ಹೇರಬೇಕು ಎಂದರು.

ಕಳೆದ 10 ವರ್ಷಗಳ ಹಿಂದೆ 2.3 ಟ್ರಿಲಿಯನ್ ಡಾಲರ್ ಆರ್ಥಿಕತೆ ಹೊಂದಿದ್ದ ಭಾರತವು ಈಗ 3.5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ರಾಷ್ಟ್ರವಾಗಿ ಜಗತ್ತಿನ 5ನೇ ಸ್ಥಾನದಲ್ಲಿದೆ. 25ರ ವೇಳೆಗೆ ಭಾರತವು ವಿಶ್ವದ ಮೂರನೇ ಬಲಿಷ್ಠ ರಾಷ್ಟ್ರವಾಗಿ ಹಾಗೂ ಮುಂದಿನ 25 ವರ್ಷಗಳಲ್ಲಿ ಪ್ರಪಂಚದ ಪ್ರಥಮ ಅಥವಾ ದ್ವಿತೀಯ ರಾಷ್ಟ್ರವಾಗಿ ಹೊರಹೊಮ್ಮುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.


ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ ಮಾತನಾಡಿ, ಕೇಂದ್ರ ಸರಕಾರ ಯಾವುದೇ ರಾಜ್ಯದಲ್ಲಿ ನೀರಿನ ಸಮಸ್ಯೆಯನ್ನು ದೇಶದ ಸಮಸ್ಯೆ ಎಂದು ಭಾವಿಸಿ ಆ ಸಮಸ್ಯೆಯನ್ನು ಬಗೆಹರಿಸಿದರೆ, ರಾಜ್ಯಕ್ಕೆ ಹೆಚ್ಚಿನ ನೀರು ಲಭಿಸಿ, ವಿದ್ಯುತ್ ಉತ್ಪಾದಿಸಲು ಅನುಕೂಲವಾಗಲಿದೆ ಎಂದು ಹೇಳಿದರು.

ವಿದೇಶಗಳಿಂದ ಆಮದು ಮಾಡಿಕೊಳ್ಳುವ ಕೃಷಿ ಉಪಕರಣ ಮೇಲಿನ ಆಮದು ಸುಂಕ ಕಡಿಮೆ ಮಾಡಿ, ರೈತರಿಗೆ ಕಡಿಮೆ ಬೆಲೆಯಲ್ಲಿ ದೊರೆಯುವಂತೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ಸತತವಾಗಿ ಬೆಳೆಗಳಿಗೆ ರೋಗ ಬರುತ್ತಿದೆ. ಅವುಗಳಿಗೆ ಪರಿಹಾರ ಕಂಡು ಹಿಡುವ ಕಾರ್ಯವನ್ನು ವಿಶ್ವವಿದ್ಯಾನಿಲಯಗಳು ಮಾಡಬೇಕು ಎಂದು ಒತ್ತಾಯಿಸಿದರು.

ಉದ್ಯಮಿ ಬಿ.ಸಿ. ಉಮಾಪತಿ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಕೆ.ಎಸ್. ನವೀನ್, ಎಸ್.ರುದ್ರೇಗೌಡರು, ನೈಸರ್ಗಿಕ ಕೃಷಿ ತಜ್ಞ ಚಂದ್ರಶೇಖರ ನಾರಾಯಣಪುರ, ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ವಿವಿ ಕುಲಪತಿ ಡಾ.ಆರ್.ಸಿ ಜಗದೀಶ್, ಪ್ರಗತಿಪರ ರೈತ ಎಚ್. ಏಕಾಂತಯ್ಯ, ಮುಖಂಡರಾದ ಚಿದಾನಂದ ಮಠದ, ಲೋಕಿಕೆರೆ ನಾಗರಾಜ್, ಬಿ. ಚಿದಾನಂದಪ್ಪ, ಐಗೂರು ಚಂದ್ರಶೇಖರ್ ಮತ್ತಿತರರಿದ್ದರು.

ಅ.ಭಾ.ವೀ.ಲಿಂ.ಮ. ನಗರ ಮಹಿಳಾ ವಿಭಾಗದ ಸೌಮ್ಯ ಸತೀಶ್, ಕೆ.ಜಿ. ಶಿವಕುಮಾರ್, ಕು.ಖುಶಿ ಚಂದ್ರಶೇಖರ್ ನಿರೂಪಿಸಿದರು.

## ವಾಜಪೇಯಿ ದೇಶ ಸೇವೆ : ಸೋಮಣ್ಣ ಮೆಲಕು



ದಾವಣಗೆರೆ,ಡಿ.24- ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ 99ನೇ ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರ ದೇಶ ಸೇವೆ ಮತ್ತು ವ್ಯಕ್ತಿತ್ವವನ್ನು ಸಾಮಾಜಿಕ ಸೇವಾ ಕಾರ್ಯಕರ್ತ ಜೆ.ಸೋಮನಾಥ್ ಮೆಲಕು ಹಾಕಿದ್ದಾರೆ.

1982ರಲ್ಲಿ ಮುಂಬೈನಲ್ಲಿ ಏರ್ಪಾಡಾಗಿದ್ದ ಬಿಜೆಪಿ ಸಮಾವೇಶದಲ್ಲಿ ವಾಜಪೇಯಿ ಅವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ದಾವಣಗೆರೆಯಿಂದ ತಾವೂ ಸೇರಿದಂತೆ, ಬಿಜೆಪಿಯ ಅನೇಕ ಹಿರಿಯ ಮುಖಂಡರು ಪಾಲ್ಗೊಂಡಿದ್ದನ್ನು ಸೋಮನಾಥ್ ಸ್ಮರಿಸಿದ್ದಾರೆ. ತಮ್ಮೊಂದಿಗಿದ್ದ ಬೆಣ್ಣೆದೋಸೆ ಹೋಟೆಲ್ ರವಿಕುಮಾರ್, ಬಟ್ಟೆ ವ್ಯಾಪಾರಿಯಾಗಿದ್ದ ದಿ. ಮಣಿಲಾಲ್ ಕೌರ ಮತ್ತಿತರರನ್ನು ವಾಜಪೇಯಿ ಅವರು ಮಾತನಾಡಿಸಿದ್ದ ಸಂದರ್ಭದಲ್ಲಿ ಸೆರೆ ಹಿಡಿದಿದ್ದ ಚಿತ್ರವನ್ನು ಸೋಮಣ್ಣ ಫೋಟೋ ಆಲ್ಬಂನಲ್ಲಿ ನೋಡಿ ಸಂತಸ ವ್ಯಕ್ತಪಡಿಸಿದ್ದಾರೆ.

## ಕುರಿ, ಮೇಕೆ ಸಾಗಾಣಿಕೆ ತರಬೇತಿ

ದಾವಣಗೆರೆ, ಡಿ. 24- ನಗರದ ಪಶು ಆಸ್ಪತ್ರೆ ಅವರಣದಲ್ಲಿರುವ ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 27, 28 ರಂದು ಕುರಿ ಮತ್ತು ಮೇಕೆ ಸಾಗಾಣಿಕೆ ತರಬೇತಿ ಮತ್ತು ದಿನಾಂಕ 29, 30 ರಂದು ಆಧುನಿಕ ಹೈನುಗಾರಿಕೆ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ. ಸಂ 08192-233787ಗೆ ಸಂಪರ್ಕಿಸಬಹುದು.

## ಕಲಾವಿದ ಮಲ್ಲೇಶ್ ನಿಧನಕ್ಕೆ ಸೋಮಲಾಪುರ ಶೋಕ



ದಾವಣಗೆರೆ, ಡಿ. 24 - ನಗರದ ವಾದ್ಯಗೋಷ್ಠಿ ಕಲಾವಿದ ಹಾಗೂ ಗಾಂಧೀಜಿ ಹರಿಜನ ಯುವಕ ಸಂಘದ ನಿರ್ದೇಶಕ ಮತ್ತು ಜಿಲ್ಲಾ ಆರೋಗ್ಯ ಇಲಾಖೆಯ ಸಹಾಯಕ ಎಂ.ಮಲ್ಲೇಶ್ ನಿಧನಕ್ಕೆ ಕೆಪಿಸಿಸಿ ಎಸ್ಸಿ ವಿಭಾಗದ ಮಾಜಿ ಕಾರ್ಯದರ್ಶಿಯೂ ಆದ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದ ಉದ್ದಗಲಕ್ಕೂ ವಾದ್ಯ ಗೋಷ್ಠಿಯ ಎಲ್ಲಾ ವಾದ್ಯಗಳನ್ನು ನುಡಿಸಿ, ಲಕ್ಷಾಂತರ ಜನರ ಮನಸ್ಸು ರಂಜಿಸುತ್ತಿದ್ದ ವಾದ್ಯ ಕಲಾವಿದ ಮಲ್ಲೇಶ್ ಅವರ ನಿಧನದಿಂದ ಕಲಾ ರಸಿಕರಿಗೆ ತುಂಬಲಾರದ ನಷ್ಟವಾಗಿದೆ ಎಂದು ಹನುಮಂತಪ್ಪ ಕಂಬನಿ ಮಿಡಿದಿದ್ದಾರೆ.

## ನಗರದಲ್ಲಿ ಇಂದು ಶ್ರೀ ಬಕ್ಕೇಶ್ವರ ಮಹಾಸ್ವಾಮಿ ಕಾರ್ತಿಕೋತ್ಸವ



ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಯ ಕಡೇ ಕಾರ್ತಿಕೋತ್ಸವ ಇಂದು ನಡೆಯಲಿದೆ. ಸಂಜೆ 7 ಗಂಟೆಯಿಂದ ಸಣ್ಣ ರಥದಲ್ಲಿ ನಂದಿವಾಹನ ಮಹೋತ್ಸವವು ಜರುಗುವುದು. ನಂತರ ಕಡೇ ಕಾರ್ತಿಕೋತ್ಸವ ನಡೆಯುತ್ತದೆ.

ಕೆ.ಬಿ. ರಾಜು, ಚಿ. ಪ್ರತೀಕ್ ಮತ್ತು ಕುಟುಂಬದವರಿಂದ ಶ್ರೀ ಬಕ್ಕೇಶ್ವರ ಸ್ವಾಮಿ ಗದ್ದಿಗೆಗೆ ಹೂವಿನ ಅಲಂಕಾರ ಸೇವೆ ನಂತರ ರಾತ್ರಿ 10 ಗಂಟೆಯಿಂದ ಸಿಡಿಮದ್ದಿನ ಕಾರ್ಯಕ್ರಮವನ್ನು ದಿ. ಶ್ರೀ ಮಾಗಾನಹಳ್ಳಿ ಷಣ್ಮುಖಪ್ಪನವರ ಜ್ಞಾಪಕಾರ್ಥವಾಗಿ ಅವರ ಕುಟುಂದವರು ನಡೆಸಿಕೊಡುವರು ಎಂದು ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘದ ಕಾರ್ಯದರ್ಶಿ ಅಥಣಿ ಎಸ್. ವೀರಣ್ಣ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಶ್ರೀ ಬಸವೇಶ್ವರ ಶ್ರೀ ದಾನಮ್ಮ ದೇವಿ ಕಾರ್ತೀಕೋತ್ಸವ



ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಗುಡ್ಡಾಪುರದ ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ ವಿಶೇಷ ಪೂಜೆ ನಡೆಯಲಿದೆ. ರಾತ್ರಿ 8 ಗಂಟೆಗೆ ಕಡೇ ಕಾರ್ತಿಕೋತ್ಸವವು ಜರುಗಲಿದೆ.

## ಆನೆಕೊಂಡದಲ್ಲಿ ನಾಳೆ ಬಸವೇಶ್ವರ ಸ್ವಾಮಿ ಕಾರ್ತಿಕೋತ್ಸವ



ದಾವಣಗೆರೆ,ಡಿ.24-ಇಲ್ಲಿಗೆ ಸಮೀಪದ ಶ್ರೀ ಕ್ಷೇತ್ರ ಆನೆಕೊಂಡ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 26ರ ಮಂಗಳವಾರ ರಾತ್ರಿ 8 ಗಂಟೆಗೆ ಕಾರ್ತಿಕ ದೀಪೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಗೌಡ್ರ ಅಜ್ಜಪ್ಪ ತಿಳಿಸಿದ್ದಾರೆ.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಮಠದಲ್ಲಿ ಇಂದು ಕಾರ್ತಿಕ ದೀಪೋತ್ಸವ



ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಸಮಿತಿಯಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಇಂದು ಬೆಳಿಗ್ಗೆ ವಿಶೇಷ ಪೂಜೆ, ಸಂಜೆ 6 ಗಂಟೆಗೆ ಕಾರ್ತಿಕ ದೀಪೋತ್ಸವ ನಡೆಯಲಿದೆ ಎಂದು ದೇವಸ್ಥಾನ ಸಮಿತಿಯ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.







## ನಗರದಲ್ಲಿ ಲಿಂಗೇಶ್ವರ ಸ್ವಾಮಿಯ ಕಾರ್ತಿಕ



ಅಶೋಕ ಚಿತ್ರ ಮಂದಿರ ರೈಲ್ವೆ ಗೇಟ್ ಬಳಿಯ ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನ ದಲ್ಲಿ ಕಡೇ ಕಾರ್ತಿಕೋತ್ಸವವು ಇಂದು ರಾತ್ರಿ 7.30 ಕ್ಕೆ ಜರುಗಲಿದೆ. ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗುವುದು ಎಂದು ಶ್ರೀ ಲಿಂಗೇಶ್ವರ ದೇವಸ್ಥಾನ ಸಂಘದ ಕಾರ್ಯದರ್ಶಿ ಕಿರುವಾಡಿ ಸೋಮಶೇಖರ್ ತಿಳಿಸಿದ್ದಾರೆ.

## ಬಿ. ಕಲಪನಹಳ್ಳಿಯಲ್ಲಿ ನಾಳೆ ಶರಣಬಸಪ್ಪಜ್ಜನವರ ಕಾರ್ತಿಕ



ದಾವಣಗೆರೆ, ಡಿ. 24 - ಇಲ್ಲಿಗೆ ಸಮೀಪದ ಬಿ. ಕಲಪನಹಳ್ಳಿ ಗ್ರಾಮದ ಶ್ರೀ ಶರಣ ಬಸಪ್ಪಜ್ಜನವರ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 26ರ ಮಂಗಳವಾರ ರಾತ್ರಿ 7.30 ಕ್ಕೆ ನಡೆಯಲಿದೆ.









